ಕನ್ನಡಪ್ರಭ
ಸೋಮವಾರ 4.05.2026



ನೀಟ್ ಪರೀಕ್ಷೆ: 109 ವಿದ್ಯಾರ್ಥಿಗಳು ಗೈರು


ಬಾಗಲಕೋಟೆ: ಬಾಗಲಕೋಟೆ ನಗರದ 10 ಕೇಂದ್ರಗಳಲ್ಲಿ ಭಾನುವಾರ ನಡೆದ ನೀಟ್ ಪರೀಕ್ಷೆ ಹಿನ್ನೆಲೆಜಿಲ್ಲಾಧಿಕಾರಿ ಸಂಗಪ್ಪ ಪರೀಕ್ಷಾ ಕೇಂದ್ರಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದರು.ನವನಗರದ ಸರಕಾರಿ ಪಾಲಿಟೆಕ್ನಿಕ್ ಕಾಲೇಜ್‌ನಲ್ಲಿನ ಪರೀಕ್ಷಾ ಕೇಂದ್ರಕ್ಕೆ ಭೇಟಿ ನೀಡಿ, ಭದ್ರತಾ ವ್ಯವಸ್ಥೆ, ಸಿಸಿಟಿವಿ ಅಳವಡಿಕೆ, ಪ್ರವೇಶ ನಿಯಂತ್ರಣ ಕ್ರಮ ಸೇರಿ ಅಗತ್ಯ ಸೌಲಭ್ಯ ವೀಕ್ಷಿಸಿದರು. ಎಡಿಸಿ ಅಶೋಕ ತೇಲಿ, ಡಿಡಿಪಿಐ ಎ.ಸಿ.ಮನ್ನಕೇರಿ ಇತರರು ಇದ್ದರು. ಭಾನುವಾರ ನಡೆದ ನೀಟ್ ಪರೀಕ್ಷೆಗೆ ಒಟ್ಟು 3727 ವಿದ್ಯಾರ್ಥಿಗಳು ನೋಂದಾಯಿಸಿಕೊಂಡಿದ್ದರು. ಈ ಪೈಕಿ 3618 ವಿದ್ಯಾರ್ಥಿಗಳು ಹಾಜರಾಗಿ 109 ವಿದ್ಯಾರ್ಥಿಗಳು ಗೈರು ಹಾಜರಾಗಿರುತ್ತಾರೆ ಎಂದು ಸರಕಾರಿ ಪಾಲಿಟೆಕ್ನಿಕ್ ಕಾಲೇಜಿನ ಪ್ರಾಚಾರ್ಯ ಪಾಟೀಲ ತಿಳಿಸಿದ್ದಾರೆ.

ಗರಿಷ್ಠ 40°c | ಕನಿಷ್ಠ 23°c

ಸುದ್ದಿ ಸಿಂಚನ

ದ್ಯಾಮವ್ವದೇವಿ, ಕೋಟೆಮ್ಮದೇವಿ ಜಾತ್ರೆ

ಲೋಕಾಪುರ: ಸಮೀಪದ ಚಿತ್ರಭಾನುಕೋಟಿ ಗ್ರಾಮದಲ್ಲಿ ದ್ಯಾಮವ್ವದೇವಿ ಮತ್ತು ಶ್ರೀ ಕೋಟೆಮ್ಮದೇವಿ ಬಣ್ಣ ಕೊಡಿಸುವುದು, ನವಚಂಡಿ ಹೋಮ ಮತ್ತು ಉಡಿ ತುಂಬುವ ಕಾರ್ಯಕ್ರಮದೊಂದಿಗೆ ಅದ್ಧೂರಿಯಾಗಿ ಪ್ರಾರಂಭಗೊಂಡಿತು. 3ರಂದು ಬೆಳಗ್ಗೆ 10 ಗಂಟೆಗೆ ನವಚಂಡಿ ಹೋಮ ಪ್ರಾರಂಭಗೊಂಡಿತು. ರಾತ್ರಿ 10ಕ್ಕೆ ಗಾನಯೋಗಿ ನಾಟ್ಯ ಸಂಘ ಹೆಬ್ಬಾಳ ಇವರಿಂದ ಮೂರುದಿನದ ಸಂತೆ ನಾಟಕ ಪ್ರದರ್ಶನಗೊಳ್ಳಲಿದೆ. 5ರಂದು ಬೆಳಗ್ಗೆ 7 ರಿಂದ 1 ಗಂಟೆಯವರೆಗೆ ಡೊಳ್ಳು ಹಾಗೂ ವಿವಿಧ ವಾದ್ಯಗಳೊಂದಿಗೆ ಗ್ರಾಮದೇವಿಯ ಭವ್ಯ ಮೆರವಣಿಗೆ ಮಧ್ಯಾಹ್ನ 1 ರಿಂದ ಸಂಜೆ 7 ಗಂಟೆಯವರೆಗೆ ಯುವಕರಿಂದ ಡಿ.ಜೆ. ಕಾಯಕ್ರಮ, ಸಂಜೆ 7 ರಿಂದ 8 ಗಂಟೆಯವರೆಗೆ ಕುದುರೆ ಸೋಗು, ರಾತ್ರಿ 8 ರಿಂದ 8.30ರವರೆಗೆ ಅಮ್ಮನ ಉಡಿ ತುಂಬುವ ಕಾರ್ಯಕ್ರಮ, ರಾತ್ರಿ 10 ಗಂಟೆಗೆ ಕೊಟೆಮ್ಮದೇವಿ ನಾಟ್ಯ ಸಂಘದಿಂದ ದಿಲ್ಲಿ ಹೊಕ್ಕ ಪುಂಡ ಹುಲಿ ನಾಟಕ ಪ್ರದರ್ಶನ ನಡೆಯಲಿದೆ.



ಮೇ 11-12 ರಂದು ಹುಲಿಗೆಮ್ಮದೇವಿ ಜಾತ್ರೆ

ಅಮೀನಗಡ: ಸಮೀಪದ ಸೂಳೇಬಾವಿಯಲ್ಲಿ ಮೇ 11-12ರಂದು ಶ್ರೀ ಹುಲಿಗೆಮ್ಮದೇವಿ 211ನೇ ಜಾತ್ರಾ ಮಹೋತ್ಸವ, ಭಕ್ತಿ ಸಂಗೀತ,ಹಾಸ್ಯ ಸಂಜೆ ವಿವಿಧ ಧಾರ್ಮಿಕ ಕಾರ್ಯಕ್ರಮ ಜರುಗಲಿವೆ. ಸೂಳೇಬಾವಿ ಗ್ರಾಮದಲ್ಲಿ ಬೃಹತ್ ಅರಳೀವೃಕ್ಷದಲ್ಲಿ ಪ್ರಾಕೃತಿಕ ನಿರ್ಮಾಣಗೊಂಡಿರುವ ಜಾಗೃತ ಶಕ್ತಿಪೀಠ ಶ್ರೀ ಹುಲಿಗೆಮ್ಮದೇವಿ ದೇವಸ್ಥಾನದಲ್ಲಿ 211ನೇ ಜಾತ್ರಾ ಮಹೋತ್ಸವ ಎರಡು ದಿನ ಹಮ್ಮಿಕೊಳ್ಳಲಾಗಿದೆ. ಮೇ 11ರಂದು ಬೆಳಗ್ಗೆ 4ಕ್ಕೆ ಶ್ರೀದೇವಿಗೆ ಪಂಚಾಮೃತ ಅಭಿಷೇಕ, ವಿಶೇಷ ಅಲಂಕಾರ, ಮಹಾ ಗಣಪತಿ, ನವಗ್ರಹ, ಗಣಹೋಮ, ನವಗ್ರಹ ಸಹಿತ ಶ್ರೀದೇವಿ ಶ್ರೀ ಸೂಕ್ತದೇವಿ ಹವನ ವಿಶೇಷ ಪೂಜೆ, ಕಂಕಣದವರಿಂದ ಶ್ರೀದೇವಿಗೆ ಉಡಿ ತುಂಬುವ ಕಾರ್ಯಕ್ರಮ, 10 ಗಂಟೆಗೆ ಪೂರ್ಣಾಹುತಿ, ಶ್ರೀದೇವಿಗೆ ಲಕ್ಷ ಪುಷ್ಪಾರ್ಚನೆ, ನೈವೇದ್ಯ ಸಮರ್ಪಣೆ, ಭಕ್ತರಿಗೆ ಅನ್ನ ಪ್ರಸಾದ, ಸಂಜೆ 5 ಗಂಟೆಗೆ ಲಲಿತಾ ಸಹಸ್ರನಾಮ ಪಾರಾಯಣ, ಸಂಜೆ 7 ಗಂಟೆಗೆ ಗುಳೇದಗುಡ್ಡ ಸಂಗೀತ ಸಾಧನಾ ಬಳಗದಿಂದ ಭಕ್ತಿ ಸಂಗೀತ ಜರುಗಲಿದೆ. ಮೇ 12 ರಂದು ಬೆಳಗ್ಗೆ 4 ಗಂಟೆಗೆ ಶ್ರೀದೇವಿಗೆ ಮಹಾಪೂಜೆ, ಮಂಗಳಾರತಿ, ಮುತ್ತೈದೆಯರಿಂದ ಆರತಿ, ಡೊಳ್ಳು, ಸಕಲ ವಾದ್ಯಗಳೊಂದಿಗೆ ಗ್ರಾಮದ ಪ್ರಮುಖ ಬೀದಿಗಳಲ್ಲಿ ಕಳಸ ಹಾಗೂ ಪಾಲಕಿ ಮೆರವಣಿಗೆ. ಸಂಜೆ ಅಗ್ನಿ ಹಾಯುವುದು ಮುಂತಾದ ಧಾರ್ಮಿಕ ಕಾರ್ಯಕ್ರಮ ಜರಗಲಿವೆ. ಸಂಜೆ 7ಕ್ಕೆ ಅಮೀನಗಡ ಮೋಹನ ದೇಶಪಾಂಡೆ ಮೆಲೋಡೀಸ್ ತಂಡದಿಂದ ಹಾಸ್ಯ ಹಾಗೂ ರಸಮಂಜರಿ ಕಾರ್ಯಕ್ರಮ ಜರಗುವುದು ಎಂದು ಪ್ರಧಾನ ಅರ್ಚಕ ಮಂಜುನಾಥ ಮುಂಡಾಸದ ತಿಳಿಸಿದ್ದಾರೆ.



ಜಲಾಶಯ ಮಟ್ಟ

ಆಲಮಟ್ಟಿ
- ಗರಿಷ್ಠ ಮಟ್ಟ....................519.60ಮೀ.
- ಇಂದಿನ ಮಟ್ಟ..................510.08ಮೀ.
- ಒಳಹರಿವು.........................ಇಲ್ಲ
- ಹೊರಹರಿವು.....................2,882ಕ್ಯು

ಘಟಪ್ರಭಾ
- ಗರಿಷ್ಠ ಮಟ್ಟ....................519.60ಮೀ.
- ಇಂದಿನ ಮಟ್ಟ.............2110.950ಮೀ.
- ಒಳಹರಿವು.........................ಇಲ್ಲ
- ಹೊರಹರಿವು...................143 ಕ್ಯು



ಕಲಾದಗಿ: ದ್ವಿತೀಯ ಪಿಯುಸಿ ಹಾಗೂ ಎಸ್.ಎಸ್.ಎಲ್.ಸಿ ಪರೀಕ್ಷೆಯಲ್ಲಿ ಶೇ .80ಕ್ಕೂ ಅಧಿಕ ಅಂಕ ಗಳಿಸಿದ ಪ್ರತಿಭಾನ್ವಿತ ವಿದ್ಯಾರ್ಥಿಗಳನ್ನು ಶ್ರೀ ಸಾಯಿಬಾಬಾ ಸೇವಾ ಸಮಿತಿಯಿಂದ ಸನ್ಮಾಯಿಸಲಾಯಿತು. ಸಮಿತಿ ಪದಾಧಿಕಾರಿಗಳು ಇತರರು ಇದ್ದರು.



ಅಮೀನಗಡ: ಎಸ್‌ಎಸ್‌ಎಲ್‌ಸಿಯಲ್ಲಿ ಉತ್ತಮ ಅಂಕ ಗಳಿಸಿದ ಹಿರೇಮಾಗಿ ಸರಕಾರಿ ಪ್ರೌಢಶಾಲೆಗೆ ಪ್ರಥಮ ಸ್ಥಾನ ಪಡೆದ ಮಧು ಬೀಳಗಿ ಮನೆಗೆ ಮುಖ್ಯಶಿಕ್ಷಕ ಎಲ್.ಎನ್. ಬೋವಿ, ಶಿಕ್ಷಕರಾದ ಎಸ್. ಎಸ್. ಮಳ್ಳಿ, ವಿ.ವಿ. ಹಡಗಲಿ, ವಿ.ಡಿ. ನಿಡಗುಂದಿ ಇತರರು ಭೇಟಿ ನೀಡಿ ಸನ್ಮಾನಿಸಿದರು.

ಉಪಕದನದಲ್ಲಿ ವಿಜಯಪತಾಕೆ ಹಾರಿಸೋರ್‍ಯಾರು?

ಬಾಗಲಕೋಟೆ ಉಪ ಚುನಾವಣೆ ಫಲಿತಾಂಶ ಇಂದು ಪ್ರಕಟ | ಅಭ್ಯರ್ಥಿಗಳ ಎದೆಬಡಿತ ಹೆಚ್ಚಳ

- **ಈಶ್ವರ ಶೆಟ್ಟರ**
ಕನ್ನಡಪ್ರಭ ವಾರ್ತೆ ಬಾಗಲಕೋಟೆ

2023ರ ಸಾರ್ವತ್ರಿಕ ಚುನಾವಣೆಯಲ್ಲಿ ಕಾಂಗ್ರೆಸ್ ನಿಂದ ಶಾಸಕರಾಗಿದ್ದ ಎಚ್.ವೈ. ಮೇಟಿಯವರ ಅಕಾಲಿಕ ನಿಧನದಿಂದ ತೆರವಾದ ಬಾಗಲಕೋಟೆ ವಿಧಾನಸಭೆ ಕ್ಷೇತ್ರಕ್ಕೆ ಉಪಚುನಾವಣೆ ನಡೆದು ಫಲಿತಾಂಶಕ್ಕೆ ಕ್ಷಣಗಣನೆ ಆರಂಭವಾಗಿದೆ. ಆಡಳಿತಾರೂಢ ಕಾಂಗ್ರೆಸ್ ಹಾಗೂ ಪ್ರತಿಪಕ್ಷ ಬಿಜೆಪಿ ಮಧ್ಯೆ ತೀವ್ರ ತುರುಸಿನ ಪೈಪೋಟಿಗೆ ಸಾಕ್ಷಿಯಾದ ಚುನಾವಣೆಯ ಫಲಿತಾಂಶ ಸೋಮವಾರ ಪ್ರಕಟವಾಗಲಿದ್ದು, ಎರಡೂ ಪಕ್ಷಗಳ ಅಭ್ಯರ್ಥಿಗಳ ಎದೆಬಡಿತ ಹೆಚ್ಚಿಸಿದೆ.ಆಡಳಿತಾರೂಢ ಕಾಂಗ್ರೆಸ್ ಗೆ ಉಪಚುನಾವಣೆ ಪ್ರತಿಷ್ಠೆಯ ಪ್ರಶ್ನೆಯಾಗಿದ್ದು, ಗೆಲ್ಲಲೇಬೇಕಾದ ಅನಿವಾರ್ಯತೆ ಇದ್ದರೆ, ಕಳೆದ ಬಾರಿ ತೀವ್ರ ಪೈಪೋಟಿ ನೀಡಿ ಸೋಲು ಅನುಭವಿಸಿದ ಬಿಜೆಪಿಗೆ ಸರ್ಕಾರದ ಆಡಳಿತ ವಿರೋಧಿ ಅಲೆ ಬಳಸಿಕೊಂಡು ಮತ್ತೊಮ್ಮೆ ಮತಕ್ಷೇತ್ರ ಪಡೆದು ಮುಂಬರುವ ಚುನಾವಣೆಗೆ ಸಿದ್ಧಗೊಳ್ಳಲು ಸಜ್ಜಾಗಿದೆ.


ತೀವ್ರ ಹಣಾಹಣಿ: ಮತ ಕ್ಷೇತ್ರದಲ್ಲಿ ಕಾಂಗ್ರೆಸ್ ಪಕ್ಷ ತನ್ನ ಅಭ್ಯರ್ಥಿ ಗೆಲುವಿಗೆ ಅನುಕಂಪ ಮತ್ತು ಸರ್ಕಾರದ ಗ್ಯಾರಂಟಿ ಯೋಜನೆಗಳನ್ನು ನೆಚ್ಚಿಕೊಂಡಿದ್ದರೆ ಬಿಜೆಪಿ ತನ್ನ ಅವಧಿಯಲ್ಲಿನ ಅಭಿವೃದ್ಧಿ ಕಾರ್ಯ ಹಾಗೂ ಆಡಳಿತ ವಿರೋಧಿ ಅಲೆ ಅವಲಂಬಿಸಿದೆ.

ಕ್ಷೇತ್ರದಲ್ಲಿ ಮತದಾರರನ್ನು ಒಲಿಸಿಕೊಳ್ಳಲು ಉಭಯ ಪಕ್ಷಗಳು ಆಯಾ ಜಾತಿ, ಜನಾಂಗದ ನಾಯಕರು, ಸಚಿವರನ್ನು ಬಳಸಿಕೊಂಡು ನಗರ ಹಾಗೂ ಗ್ರಾಮೀಣ ಪ್ರದೇಶದಲ್ಲಿ ಇನ್ನಿಲ್ಲದ ಕಸರತ್ತನ್ನು ನಡೆಸಿವೆ.

ಫಲಿತಾಂಶ ಏನಾಗಬಹುದು ? : ಚುನಾವಣೆಯ ನಂತರದಲ್ಲಿ ಕಾಂಗ್ರೆಸ್ ಮತ್ತು ಬಿಜೆಪಿ ಪಕ್ಷಗಳ ನಡುವೆ ಗೆಲವಿನ ಲೆಕ್ಕಾಚಾರಗಳು ನಡೆದಿವೆಯಾದರೂ ಸಹ ಕೆಲವು ಸಮೀಕ್ಷೆಗಳ ವರದಿಗಳು ಸಹ ಉಭಯ ಅಭ್ಯರ್ಥಿಗಳ ನಿದ್ದೆ ಕೆಡಿಸಿವೆ ಅಂದರೆ ತಪ್ಪಾಗಲಾರದು.

ಮತಕ್ಷೇತ್ರದಲ್ಲಿನ ಮತದಾರರ ನಾಡಿಮಿಡಿತ ಅರ್ಥವಾಗದಿದ್ದರೂ ಸಹ ಮೇಲ್ನೋಟಕ್ಕೆ ಕಾಂಗ್ರೆಸ್ ಮತ್ತು ಬಿಜೆಪಿ ಪಕ್ಷಗಳಲ್ಲಿ ಸಮ ಬಲದ ಹೋರಾಟ ಕಾಣುತ್ತಿದೆ. ನಗರ ಪ್ರದೇಶದಲ್ಲಿ ಬಿಜೆಪಿ ಮುಂದಿದ್ದರೆ, ಗ್ರಾಮೀಣ ಪ್ರದೇಶದಲ್ಲಿ ಕಾಂಗ್ರೆಸ್ ಪಕ್ಷಕ್ಕೆ ಮುನ್ನಡೆ ಕಂಡುಬರುತ್ತಿದೆ. ಬಾಗಲಕೋಟೆ ಕ್ಷೇತ್ರದ ಉಪಚುನಾವಣೆ ಕಾರಣಕ್ಕೆ ಮತದಾರರು ಅದರಲ್ಲೂ ಜಾತಿಗಳ ಒಗ್ಗಟ್ಟು ಸಹ ಕಾಣತೊಡಗಿದೆ. ಲಿಂಗಾಯತ ಸಮುದಾಯದ ಮತಗಳ ವಿಭಜನೆಯಾಗದೆ ಬಿಜೆಪಿಯ ಪಾರಂಪರಿಕ ಮತಗಳ ಕ್ರೋಡೀಕರಣ ಮತ್ತು ಕಳೆದ ಬಾರಿ ಕಳೆದುಕೊಂಡ ಮತಗಳನ್ನು ಮರಳಿ ಪಡೆದು ಇತರ ಜಾತಿಗಳ ಮತಗಳನ್ನು ಪಡೆಯುವಲ್ಲಿ ಯಶಸ್ವಿಯಾದರೆ ಬಿಜೆಪಿ ಮತ್ತೆ ಕ್ಷೇತ್ರದಲ್ಲಿ ಕಮಲ ತೆಕ್ಕೆಗೆ ಪಡೆದುಕೊಳ್ಳಬಹುದು.

ಕಾಂಗ್ರೆಸ್ ಪಕ್ಷ ಅನುಕಂಪದ ಮತಗಳು, ಕ್ಷೇತ್ರದಲ್ಲಿ ಹೆಚ್ಚಾಗಿರುವ ಹಾಲುಮತ, ಅಲ್ಪಸಂಖ್ಯಾತ ಮತಗಳ ಜೊತೆಗೆ ದಲಿತ ಸಮುದಾಯದ ಮತಗಳು ಬಂದರೆ, ಸರ್ಕಾರದ ಗ್ಯಾರಂಟಿ ಯೋಜನೆಗಳು ಕೈಹಿಡಿದರೆ ಗೆಲುವು ಕಷ್ಟವಾಗಲಾರದು ಎಂಬ ವಿಶ್ಲೇಷಣೆಗಳು ನಡೆದಿವೆ.



ಉಭಯ ಪಕ್ಷಗಳಿಗೂ ಪ್ರತಿಷ್ಠೆಯ ಕಣ




ಕ್ಷೇತ್ರದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಐದು ದಿನಗಳ ಪ್ರವಾಸ ಕೈಗೊಂಡು ಸರ್ಕಾರದ ಸಾಧನೆ ಹಾಗೂ ಅನುಕಂಪದ ಅಲೆಗೆ ಜೋತು ಬಿದ್ದು, ಕಾಂಗ್ರೆಸ್ ಗೆಲುವಿಗೆ ಇನ್ನಿಲ್ಲದ ಕಸರತ್ತು ಮಾಡಿದ್ದಾರೆ. ಅವರಿಗೆ ಜೊತೆಯಾಗಿ ಜಿಲ್ಲಾ ಉಸ್ತುವಾರಿ ಸಚಿವ ಆರ್. ಬಿ. ತಿಮ್ಮಾಪೂರ ಹಾಗೂ ಸಚಿವ ಸತೀಶ ಜಾರಕಿಹೋಳಿ ಅವರು ಕ್ಷೇತ್ರದಲ್ಲಿ ಬೀಡು ಬಿಟ್ಟು ಚುನಾವಣೆ ತಂತ್ರ ರೂಪಿಸಿದ್ದರು. ಬಿಜೆಪಿಯೂ ಸಹ ಗೆಲುವಿಗೆ ಪಕ್ಷದ ರಾಜ್ಯಾಧ್ಯಕ್ಷ ವಿಜಯೇಂದ್ರ ಅವರು ಕ್ಷೇತ್ರದಲ್ಲಿ ಎರಡು ದಿನಗಳ ಕಾಲ ಬೀಡು ಬಿಟ್ಟು ನಗರ ಹಾಗೂ ಗ್ರಾಮೀಣ ಪ್ರದೇಶದಲ್ಲಿ ಪ್ರಚಾರದ ಜೊತೆಗೆ ಬಿಜೆಪಿಯಲ್ಲಿನ ಆಂತರಿಕ ಸಮಸ್ಯೆಗಳನ್ನು ಬಗೆಹರಿಸಿ ಚುನಾವಣೆ ಮಾಡಿದರು. ಜೊತೆಗೆ ಬಿಜೆಪಿಯ ಉಚ್ಚಾಟಿತ ಶಾಸಕ ಯತ್ನಾಳ ಅವರನ್ನು ಕರೆತಂದು ಪ್ರಚಾರ ಮಾಡಿಸಿ ಹಿಂದೂ ಮತಗಳ ಕ್ರೋಡೀಕರಣಕ್ಕೆ ಮುಂದಾಗಿದ್ದರು. ಸೋಮವಾರ ಎಲ್ಲ ಪ್ರಶ್ನೆಗಳಿಗೆ ಸ್ಪಷ್ಟ ಉತ್ತರ ಸಿಗಲಿದೆ.

ಉಪ ಚುನಾವಣೆಯಲ್ಲಿ ಗೆಲುವು ನಮ್ಮದೆ: ಭಾಂಡಗೆ



- **ಕನ್ನಡಪ್ರಭವಾರ್ತೆ** ಕೆರೂರ

ಬಾಗಲಕೋಟೆ ಉಪ ಚುನಾವಣೆಯಲ್ಲಿ ಮತದಾರರಿಗೆಸತ್ಯ ತಿಳಿಸಿದ್ದೇವೆ. ಮತದಾರರು ನಮ್ಮ ಪರವಾಗಿದ್ದಾರೆ. ಗೆಲುವು ನಮ್ಮದೆ ಎಂದು ರಾಜ್ಯಸಭಾ ಸದಸ್ಯ ನಾರಾಯಣಸಾ ಭಾಂಡಗೆ ಹೇಳಿದರು.

9 ವರ್ಷದ ನಂತರ ಜರುಗಿದ ಪಟ್ಟಣದ ಶ್ರೀ ದ್ಯಾಮವ್ವ ದುರ್ಗವ್ವ ಜಾತ್ರೆಗೆ ಬಂದು ದೇವಿಯರ ದರ್ಶನ ಪಡೆದು ಬಿಜೆಪಿ ಧುರೀಣ ಎನ್.ಬಿ. ಬನ್ನೂರರ ಮನೆಯಲ್ಲಿ ಪತ್ರಕರ್ತರೊಂದಿಗೆ ಮಾತನಾಡುತ್ತಿದ್ದರು. ಇಷ್ಟೊಂದು ವೈಭವಯುತವಾಗಿ ಭಕ್ತಿ ಭಾವದಿಂದ ಒಗ್ಗಟ್ಟಾಗಿ ಜಾತ್ರಾ ಮಹೋತ್ಸವ ನಡೆಸಿದ್ದು ಸಂತಸದ ವಿಷಯವಾಗಿದೆ. ನಾವು ಕೂಡ ಆ ಸಂತೋಷದಲ್ಲಿ ಭಾಗಿಯಾಗಲು ಬಂದು ದೇವಿಯರ ದರ್ಶನ ಪಡೆದು ಪುನೀತರಾಗಿದ್ದೇವೆ. ಆ ದೇವಿಯರು ಕೆರೂರಿಗಷ್ಟೆ ಅಲ್ಲ, ಇಡೀ ಜಿಲ್ಲೆ ಸೇರಿ ದೇಶದ ಎಲ್ಲ ನಾಗರಿಕರನ್ನು ಉತ್ತಮ ಆಯುರಾರೋಗ್ಯ, ಸಂಪತ್ತು ಕೊಟ್ಟು ಕರಣಿಸಲೆಂದು ಪ್ರಾರ್ಥಿಸಿದ್ದೇವೆಂದರು.

ಬಿಜೆಪಿ ಜಿಲ್ಲಾಧ್ಯಕ್ಷ ಶಾಂತಗೌಡ ಪಾಟೀಲ ಪ್ರಮುಖರಾದ ಎನ್.ಬಿ. ಬನ್ನೂರ, ನಾಗರಾಜ ಕಾಚಟ್ಟಿ, ಕುಮಾರ ಘಟ್ಟದ, ಸಂಗಣ್ಣ ನಾಯನೇಗಲಿ, ಮುತ್ತು ಉಳ್ಳಾಗಡ್ಡಿ, ಶರಣು ಸಜ್ಜನ, ರಾಚಪ್ಪ ಶೆಟ್ಟರ, ಹನುಮಂತ ಪ್ರಭಾಕರ, ಗುಂಡಣ್ಣ ಬೋರಣ್ಣವರ ಸೇರಿದಂತೆ ಅನೇಕ ಪ್ರಮುಖರಿದ್ದರು.

ಉಪ ಚುನಾವಣೆ: ಮತ ಎಣಿಕೆ 2ನೇ ಹಂತದ ತರಬೇತಿ

- **ಕನ್ನಡಪ್ರಭ ವಾರ್ತೆ** ಬಾಗಲಕೋಟೆ

ಬಾಗಲಕೋಟೆ ಉಪ ಚುನಾವಣೆ ಹಿನ್ನೆಲೆ ಮತ ಎಣಿಕೆ ಸುಗಮ ಹಾಗೂ ಪಾರದರ್ಶಕವಾಗಿ ನಡೆಸುವ ಉದ್ದೇಶದಿಂದ ಮತ ಎಣಿಕೆಯ 2ನೇ ಹಂತದ ತರಬೇತಿ ಕಾರ್ಯಕ್ರಮ ಭಾನುವಾರ ಜರುಗಿತು.

ಜಿಲ್ಲಾಧಿಕಾರಿಗಳ ಸಭಾಂಗಣದಲ್ಲಿ ಜಿಲ್ಲಾಧಿಕಾರಿ ನೇತೃತ್ವದಲ್ಲಿ ಹಾಗೂ ಉಪ ಚುನಾವಣೆಯ ಸಾಮಾನ್ಯ ವೀಕ್ಷಕರಾದ ಪಾರುಲ್ ಪಟವಾರಿ ಅವರ ಸಮ್ಮುಖದಲ್ಲಿ ಮತ ಎಣಿಕೆಯ 2ನೇ ಹಂತದ ತರಬೇತಿ ನೀಡಲಾಯಿತು.

ತರಬೇತಿಯಲ್ಲಿ ಮತ ಎಣಿಕೆ ಸಿಬ್ಬಂದಿಗೆ ಮತ ಎಣಿಕೆ ಪ್ರಕ್ರಿಯೆ, ಇವಿಎಂ ಮತ್ತು ವಿವಿಪ್ಯಾಟ್ ಯಂತ್ರಗಳ ಬಳಕೆ, ಮತ ಎಣಿಕೆಯ ವೇಳೆ ಪಾಲಿಸಬೇಕಾದ ಮಾರ್ಗಸೂಚಿಗಳು ಹಾಗೂ ಮಾರ್ಗಸೂಚಿಯ ಕುರಿತು ವಿವರವಾದ ಮಾಹಿತಿ ನೀಡಲಾಯಿತು. ಪ್ರತಿ ಹಂತದಲ್ಲಿಯೂ ಕಟ್ಟುನಿಟ್ಟಿನ ಕ್ರಮ ಅನುಸರಿಸುವಂತೆ ಸೂಚಿಸಲಾಯಿತು.

ತರಬೇತಿಯಲ್ಲಿ ವಿಶೇಷವಾಗಿ ಮತ ಎಣಿಕೆ ಟೇಬಲ್ ವ್ಯವಸ್ಥೆ, ಫಲಿತಾಂಶ ದಾಖಲಿಸುವ ವಿಧಾನ, ಅಂತಿಮ ಫಲಿತಾಂಶ ಘೋಷಣೆ ಪ್ರಕ್ರಿಯೆ ಕುರಿತು ತಿಳಿಸಿಕೊಡಲಾಯಿತು. ಸಿಬ್ಬಂದಿ ಯಾವುದೇ ಗೊಂದಲವಿಲ್ಲದೆ ತಮ್ಮ ಕರ್ತವ್ಯ ನಿರ್ವಹಿಸುವಂತೆ ತಿಳಿಸಲಾಯಿತು.

ಜಿಲ್ಲಾ ಚುನಾವಣಾಧಿಕಾರಿ ಸಂಗಪ್ಪ ಅವರು ಮಾತನಾಡಿ, ಮತ ಎಣಿಕೆ ಪ್ರಕ್ರಿಯೆ ಅತ್ಯಂತ ಮಹತ್ವದ್ದಾಗಿದ್ದು, ಪ್ರತಿಯೊಬ್ಬ ಸಿಬ್ಬಂದಿಯೂ ಜವಾಬ್ದಾರಿಯುತವಾಗಿ ಕಾರ್ಯ ನಿರ್ವಹಿಸಲು ತಿಳಿಸಿದರು.

ಮಾಸ್ಟರ್ ಟ್ರೈನರ್‌ಸಣತಂಗಿ ತರಬೇತಿ ನೀಡಿದರು. ತರಬೇತಿಯಲ್ಲಿ ಅಪರ ಜಿಲ್ಲಾಧಿಕಾರಿ ಅಶೋಕ ತೇಲಿ, ಉಪ ವಿಭಾಗಾಧಿಕಾರಿ ಹಾಗೂ ಚುನಾವಣಾಧಿಕಾರಿ ಸಂತೋಷ ಜಗಲಾಸರ, ತಹಶೀಲ್ದಾರ ವಾಸುದೇವ ಸ್ವಾಮಿ ಉಪಸ್ಥಿತರಿದ್ದರು.

ತರಬೇತಿ ಕಾರ್ಯದಲ್ಲಿ ಮತ ಎಣಿಕೆ ಮೇಲ್ವಿಚಾರಕರು, ಸಹಾಯಕ ಹಾಗೂ ಮೈಕ್ರೋ ಆಬ್ಸರ್ವರ್ ಪಾಲ್ಗೊಂಡಿದ್ದರು.



ಅನಿಮೇಷನ್ ಕ್ಷೇತ್ರದಲ್ಲಿದೆ ವಿಪುಲ ಅವಕಾಶ

ಸಿದ್ಧಿ ಸೊಪಾನಮ್-2026ರ ಕಾರ್ಯಕ್ರಮದಲ್ಲಿ ಅನಿಮೇಷನ್ ತಜ್ಞ ಯುನೂಸ್ ಬುಖಾರಿ

- **ಕನ್ನಡಪ್ರಭ ವಾರ್ತೆ** ಮುಧೋಳ

ಅನಿಮೆಷನ್, ಕೃತಕ ಬುದ್ಧಿಮತ್ತೆ, ಲಾರ್ಜ್ ಲ್ಯಾಂಗ್ವೆಜ್ ಮಾಡೆಲ್ಸ್ ಮತ್ತು ಇಮರ್ಸಿವ್ ಟೆಕ್ನಾಲಾಜಿಗಳಂತಹ ಕ್ಷೇತ್ರಗಳಲ್ಲಿ ಅಪಾರ ಉದ್ಯೋಗವಕಾಶಗಳಿವೆ. ಈಗ ಅನಿಮೇಶನ್ ಕೇವಲ ಮನರಂಜನೆಗೆ ಮಾತ್ರ ಸೀಮಿತವಾಗಿರದೇ ಎಂಜಿನಿಯರಿಂಗ್ ವಿನ್ಯಾಸ ಮತ್ತು ವರ್ಚನಲ್ ರಿಯಾಲಿಟಿ ಸೇರಿದಂತೆ ಹಲವು ಕ್ಷೇತ್ರಗಳಲ್ಲಿ ಪ್ರಮುಖ ಪಾತ್ರ ವಹಿಸುತ್ತಿದೆ. ತಾಂತ್ರಿಕ ಜ್ಞಾನ ಮತ್ತು ಸೃಜನಶೀಲತೆಯನ್ನು ಸಂಯೋಜಿಸುವ ವಿದ್ಯಾರ್ಥಿಗಳೇ ಭವಿಷ್ಯದಲ್ಲಿ ಯಶಸ್ವಿಯಾಗುತ್ತಾರೆ ಎಂದು ಭಾರತೀಯ ಚಲನಚಿತ್ರರಂಗದ ಅನಿಮೇಷನ್ ಕ್ಷೇತ್ರದ ತಜ್ಞರಾದ ಮತ್ತು ಕೆ.ಸೇರಾ ಸೇರಾ ವರ್ಚನಲ್ ಪ್ರೊಡಕ್ಷನ್ ಸಂಸ್ಥೆಯ ಸಿ.ಇ.ಒ ಯುನೂಸ್ ಬುಖಾರಿ ಹೇಳಿದರು. ಬಾಗಲಕೋಟೆ ಬಿವ್ಹಿವ್ಹಿ ಸಂಘದ ನಗರದ ಬೀಳೂರು ಗುರುಬಸವ ಮಹಾಸ್ವಾಮೀಜಿ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಾಜಿ (ಬಿಜಿಎಂಟಿ) ಮಹಾವಿದ್ಯಾಲಯದ ತಾಂತ್ರಿಕ ಮತ್ತು ಶೈಕ್ಷಣಿಕ ಕಾರ್ಯಕ್ರಮಗಳ ಸಮರೋಪ ಸಮಾರಂಭ ಸಿದ್ದಿ ಸೊಪಾನಮ್-2026ರ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ವಿದ್ಯಾರ್ಥಿಗಳನ್ನು ಉದ್ದೇಶಿಸಿ ಮಾತನಾಡಿದರು.

ಅಧ್ಯಕ್ಷತೆ ವಹಿಸಿದ್ಧ ಸಂಸ್ಥೆಯ ಪ್ರಾಂಶುಪಾಲ ಡಾ.ಶ್ರವಣಕುಮಾರ ಕೆರೂರ ಮಾತನಾಡಿ, ಇಂತಹ ಕಾರ್ಯಕ್ರಮಗಳು ವಿದ್ಯಾರ್ಥಿಗಳಿಗೆ ಕೈಗಾರಿಕ ಜ್ಞಾನ ಅರಿಯಲು ಉತ್ತಮ ವೇದಿಕೆಯಾಗಿದೆ. ನವೀನತೆ ಮತ್ತು ತಾಂತ್ರಿಕ ಕೌಶಲ್ಯಗಳ ಬೆಳವಣಿಗೆ ಎಂಜಿನಿಯರಿಂಗ್ ವಿದ್ಯಾರ್ಥಿಗಳ ಭವಿಷ್ಯ ರೂಪಿಸುತ್ತದೆ ಎಂದು ತಿಳಿಸಿದರು.

ಇದೇ ಸಂದರ್ಭದಲ್ಲಿ ಶೈಕ್ಷಣಿಕ ಮತ್ತು ಕ್ರೀಡಾ ಚಟುವಟಿಕೆಗಳಲ್ಲಿ ಸಾಧನೆಗೈದ ವಿಧ್ಯಾರ್ಥಿಗಳಿಗೆ ಅಭಿನಂದಿಸಿದರು. ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳಾದ ಅನಗಾ ಕುಲಕರ್ಣಿ ಮತ್ತು ಹರ್ಷ ಶಹಾ ನಿರೂಪಿಸಿದರು. ಪ್ರಾಚಿ ಪ್ರಸಾದ ಸ್ವಾಗತಿಸಿದರು, ಪ್ರೊ. ಗೀತಾ ಜಿರಲಿ ವಂದಿಸಿದರು. ಕಾಲೇಜಿನ ಮಾಧ್ಯಮ ಪ್ರತಿನಿಧಿ ವಿನಯ ಶೆಟ್ಟರ, ವಿಧ್ಯಾರ್ಥಿ ಪ್ರತಿನಿಧಿಗಳಾದ ಮಹಾದೇವ ಪಟೊಲಿ, ಬಸಮ್ಮ ಕರಿಗೌಡರ, ಜಿಮಖಾನ್ ಚೆರಮನ್ ಮಲ್ಲು ಹುಣಶಿಕಟ್ಟಿ, ದೈಹಿಕ ನಿರ್ದೇಶಕ ಮೌನೇಶ ಯಂಡಿಗೇರಿ ಹಾಗೂ ಎಲ್ಲ ವಿಭಾಗಗಳ ಮುಖ್ಯಸ್ಥರು, ಬೊಧಕ, ಬೋಧಕೇತರ ಸಿಬ್ಬಂದಿ ಮತ್ತು ವಿಧ್ಯಾರ್ಥಿಗಳು ಉಪಸ್ಥಿತರಿದ್ದರು.



ಪ್ಯಾರಾ ಮೆಡಿಕಲ್ ಫಲಿತಾಂಶ: ಹೊರಕೇರಿ ಇನ್‌ಸ್ಟಿಟ್ಯೂಟ್ ವಿದ್ಯಾರ್ಥಿಗಳ ಉತ್ತಮ ಸಾಧನೆ

ಬಾದಾಮಿ: ತಾಲೂಕಿನ ಬೇಲೂರು ಗ್ರಾಮದ ಬಿ.ಎಂ.ಹೊರಕೇರಿ ಪ್ಯಾರಾ ಮೆಡಿಕಲ್ ಸೈನ್ಸಸ್ ಫಲಿತಾಂಶದಲ್ಲಿ ವಿದ್ಯಾರ್ಥಿಗಳು ಉತ್ತಮ ಸಾಧನೆ ಮಾಡಿದ್ದಾರೆ. ಸಂಸ್ಥೆಯ 2024-25ನೇ ಸಾಲಿನ ಪರೀಕ್ಷಾ ಫಲಿತಾಂಶವು ಶೇ.98.7 ರಷ್ಟಾಗಿದ್ದು, ಪ್ರಥಮ ವರ್ಷದಲ್ಲಿ ಐಶ್ವರ್ಯ ಭಜಂತ್ರಿ ಶೇ.69, 3ನೇ ವರ್ಷದಲ್ಲಿ ಕಾವೇರಿ ಮಲ್ಲಾಡದ ಶೇ.64.3, ಕರಿಷ್ಮಾ ಗೌರಾಳ ಶೇ.77.12 - 3ನೇ ವರ್ಷದಲ್ಲಿ ಕುಮಾರಗೌಡ ರಾಯನಗೌಡ್ರ ಶೇ.75.33 ಪಡೆದು ಉತ್ತಮ ಸಾಧನೆ ಮಾಡಿದ್ದಾರೆ ಎಂದು ಸಂಸ್ಥೆಯ ಪ್ರಾಚಾರ್ಯರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ವಿದ್ಯಾರ್ಥಿಗಳ ಸಾಧನೆಗೆ ಸಂಸ್ಥೆಯ ಆಡಳಿತ ಮಂಡಳಿ ಹಾಗೂ ಸಿಬ್ಬಂದಿ ವರ್ಗ ಅಭಿನಂದನೆ ಸಲ್ಲಿಸಿದ್ದಾರೆ.

ಪುಣ್ಯಾರಾಧನೆ...

ಮೈಗೂರಿನ ಪವಾಡ ಪುರುಷ ನಾಟಕ ಪ್ರದರ್ಶನ ವೇಳೆ ಹಿರಿಯ ನಟ ಶ್ರೀಧರ ಅಭಿಮತ

ಸತ್ಪುರುಷರ ಒಡನಾಟದಿಂದ ಬದುಕು ಸಾರ್ಥಕ

- **ಕನ್ನಡಪ್ರಭ ವಾರ್ತೆ** ಜಮಖಂಡಿ

ಪವಾಡ ಪುರುಷರು ಹಾಗೂ ಸತ್ಪುರುಷರ ಆಶೀರ್ವಾದ ನಮ್ಮ ಬದುಕನ್ನು ಉದ್ಧಾರ ಮಾಡುತ್ತದೆ. ದೈವಾನುಗ್ರಹಕ್ಕಾಗಿ ನಾವು ಭಕ್ತಿಯಿಂದ ಪ್ರಾರ್ಥಿಸಬೇಕು ಎಂದು ಹಿರಿಯ ಚಲನಚಿತ್ರ ನಟ ಶ್ರೀಧರ ಹೇಳಿದರು.

ತಾಲೂಕಿನ ಮೈಗೂರ ಗ್ರಾಮದ ಗುರುದೇವಾಶ್ರಮದ ಆವರಣದಲ್ಲಿ ಶಿವಾನಂದ ಮಠದ ಜಾತ್ರಾ ಮಹೋತ್ಸವ ಹಾಗೂ ಲಿಂ.ಮಲ್ಲಿಕಾರ್ಜುನ ಸ್ವಾಮೀಜಿ ಅವರ ಪುಣ್ಯಾರಾಧನೆ ನಿಮಿತ್ತ ಶುಕ್ರವಾರ ರಾತ್ರಿ ಹಮ್ಮಿಕೊಂಡಿದ್ದ ಮೈಗೂರ ಪವಾಡ ಪುರುಷ ಪೌರಾಣಿಕ ನಾಟಕ ಪ್ರದರ್ಶನ ಉದ್ಘಾಟಿಸಿ ಅವರು ಮಾತನಾಡಿದರು. ಭಕ್ತಿಯಿಂದ ಕೇಳಿದ್ದನ್ನು ನೀಡಲು ಪರಮಾತ್ಮ ಸ್ವಲ್ಪ ವಿಳಂಬ ಮಾಡಬಹುದು, ಆದರೆ ಸದ್ಗುರುಗಳು ಎಂದಿಗೂ ವಿಳಂಬ ಮಾಡುವುದಿಲ್ಲ. ಭಕ್ತರ ಕಷ್ಟಗಳಿಗೆ ತಕ್ಷಣ ಸ್ಪಂದಿಸುವ ಶಕ್ತಿ ಮಹಾಗುರುಗಳಿಗಿದೆ. ಮನುಷ್ಯ ಜನ್ಮ ಪಡೆಯುವುದೇ ದೊಡ್ಡ ಪುಣ್ಯ. ಅಂತಹ ಪುಣ್ಯದ ಫಲವಾಗಿ ನಮಗೆ ಮಹಾಪುರುಷರ ಸನ್ನಿಧಿಯಲ್ಲಿ ಇರುವ ಭಾಗ್ಯ ಸಿಗುತ್ತದೆ. ಜೀವನದ ಕಷ್ಟ-ನೋವುಗಳನ್ನು ನಿವಾರಿಸುವ ಸಾಮರ್ಥ್ಯ ಸತ್ಪುರುಷರಿಗಿದೆ ಎಂದು ಅಭಿಪ್ರಾಯಪಟ್ಟರು. ನಟಿ ಅನು ಪ್ರಭಾಕರ ಮತ್ತು ಭವ್ಯಾ ಮಾತನಾಡಿ, ಪವಾಡ ಪುರುಷರು ನಡೆದಾಡಿದ ನೆಲವೇ ಪುಣ್ಯಕ್ಷೇತ್ರವಾಗಿದೆ ಎಂದು ಹೇಳಿದರು.

ಶಾಸಕ ಜಗದೀಶ ಗುಡಗುಂಟಿ ಮಾತನಾಡಿ, ಭಾರತ ವಿವಿಧ ಜಾತಿ, ಭಾಷೆಗಳಿದ್ದರೂ ವೈವಿಧ್ಯತೆಯಲ್ಲಿ ಏಕತೆ ಹೊಂದಿರುವ ರಾಷ್ಟ್ರವಾಗಿದೆ. ಇಲ್ಲಿಯ ಆಧ್ಯಾತ್ಮಿಕ ಚಿಂತನೆಗಳು ಸಮಾಜದಲ್ಲಿ ಶಾಂತಿ ನೆಲೆಸಲು ಮೂಲ ಕಾರಣವಾಗಿವೆ ಎಂದು ತಿಳಿಸಿದರು.

ಶ್ರೀಮಠದ ಗುರುಪ್ರಸಾದ ಸ್ವಾಮೀಜಿ ಮಾತನಾಡಿದರು. ಹುಲ್ಯಾಳ ಗುರುದೇವಾಶ್ರಮದ ಹರ್ಷಾನಂದ ಸ್ವಾಮೀಜಿ, ಬಾಲ್ಕಿಯ ಶ್ರೀಗಳು ಸಾನ್ನಿಧ್ಯ ವಹಿಸಿದ್ದರು. ಗ್ರಾಮದ ಹಿರಿಯ ಪರಪ್ಪ ಕಕಮರಿ ಅಧ್ಯಕ್ಷತೆ ವಹಿಸಿದ್ದರು.

ವೇದಿಕೆಯಲ್ಲಿ ಬೆಂಗಳೂರಿನ ಪಿಎಸ್‌ಐ ಕುಮಾರ ಮೂಕನವರ, ಮಲ್ಲು ಬಿ. ಪಾಟೀಲ, ಸಂಜು ಖೋತ, ಮುತ್ತಣ್ಣ ಮೂಕನವರ, ಭೂಪಾಲ ಸದಲಗಿ, ರಾಜೇಶ್ವರಿ ಹಿರೇಮಠ, ರಾಮ ಅಂಬಿ, ಅಡವಯ್ಯ ಹಿರೇಮಠ, ಮಹಾದೇವ ಭೀಮನಹಳ್ಳಿ, ಧರನೇಶ ನ್ಯಾಮಗೌಡ, ಶಿವಪ್ರಭು ಭೀಮನಹಳ್ಳಿ ಸಂಗೊಳ್ಳಿ ಮಠಪತಿ ಇತರರು ಇದ್ದರು.ಶಿಕ್ಷಕ ಅಪ್ಪು ಅಂಬಿ ಸ್ವಾಗತಿಸಿದರು, ಶಿಕ್ಷಕ ಎಂ.ಡಿ. ತೇಲಸಂಗ ನಿರೂಪಿಸಿದರು.

ಮನಸೂರೆಗೊಂಡ ನಾಟಕ: ಬಳ್ಳಾರಿ ಜಿಲ್ಲೆಯ ಶಿರಗೇರಿಯ ಧಾತ್ರಿ ತಂಡದವರು ಪ್ರದರ್ಶಿಸಿದ, ಶಿಶುಕವಿ ಪ್ರಕಾಶ ಮಠಪತಿ ರಚನೆಯ ಮೈಗೂರ ಪವಾಡ ಪುರುಷ ನಾಟಕ ಭಕ್ತರ ಮನಗೆಲ್ಲುವಲ್ಲಿ ಯಶಸ್ವಿಯಾಯಿತು. ಲಿಂ. ಮಲ್ಲಿಕಾರ್ಜುನ ಮಹಾಸ್ವಾಮಿಗಳ ಜೀವನಾಧಾರಿತ ಈ ನಾಟಕ ಭಕ್ತಿ ಭಾವ ಮೂಡಿಸಿತು.



ಗೊಂದಳಿ ಸಮಾಜದ ಸಾಧಕ ವಿದ್ಯಾರ್ಥಿಗಳಿಗೆ ಸನ್ಮಾನ

ಉನ್ನತ ಶ್ರೇಣಿಯಲ್ಲಿ ಪಾಸಾದ ವಿದ್ಯಾರ್ಥಿಗಳಿಗೆ ಪ್ರೋತ್ಸಾಹ: ಸುಭಾಸ ಗಾಯಕವಾಡ

- **ಕನ್ನಡ ಪ್ರಭ ವಾರ್ತೆ** ಮುಧೋಳ

ಅಖಿಲ ಕರ್ನಾಟಕ ಗೊಂದಳಿ ಸಮಾಜ ಸೇವಾ ಸಮಿತಿ ಮುಧೋಳ ಇವರ ಸಹಯೋಗದಲ್ಲಿ ನಗರದ ಗೋಲ್ಡನ್ ಸಮುದಾಯ ಭವನದಲ್ಲಿ ಇತ್ತೀಚೆಗೆ ಹಮ್ಮಿಕೊಂಡಿದ್ದ ಪಿಯು ದ್ವಿತೀಯ ವರ್ಷದ ಪರೀಕ್ಷೆ ಯಲ್ಲಿ ಉನ್ನತ ಸ್ಥಾನ ಪಡೆದು ಉತ್ತೀರ್ಣರಾದ ವಿದ್ಯಾರ್ಥಿಗಳನ್ನು ಸನ್ಮಾನಿಸಿ, ಗೌರವಿಸಲಾಯಿತು.

ಗೊಂದಳಿ ಸಮಾಜದ ಮುಖಂಡ ಸುಭಾಸ ಗಾಯಕವಾಡ ಮಾತನಾಡಿ, ಹಿಂದುಳಿದ ಗೊಂದಳಿ ಸಮಾಜದ ಮಕ್ಕಳು ಶೇ.90ಕ್ಕೂ ಅಧಿಕ ಅಂಕ ಪಡೆದು ಉನ್ನತ ಶ್ರೇಣಿಯಲ್ಲಿ ಪಾಸಾದ ಈ ವಿದ್ಯಾರ್ಥಿಗಳಿಂದ ಮುಂದಿನ ವಿದ್ಯಾಭ್ಯಾಸ ಉತ್ತಮವಾಗಿ ಪಡೆಯಲು ಅವರಿಗೆ ಪ್ರೋತ್ಸಾಹದಾಯಕ ಈ ಸನ್ಮಾನ ಸಮಾರಂಭದ ಮುಖ್ಯ ಉದ್ದೇಶ ಆಗಿದೆ ಎಂದರು.

ಶಿವಾಜಿ ಅಡೇಕರ ಮಾತನಾಡಿ ಯಾವದೇ ಕ್ಷೇತ್ರದಲ್ಲಿ ವಿದ್ಯಾರ್ಥಿಗಳು ಸಾಧನೆ ಮಾಡಿದಲ್ಲಿ ಅಂತವರನ್ನು ಗುರುತಿಸಿ ಇಂತಹ ಪ್ರೋತ್ಸಾಹದಾಯಕ ಕಾರ್ಯಗಳು ಹಮ್ಮಿಕೊಳ್ಳುವಲ್ಲಿ ಸಮಾಜದ ಮುಖಂಡರ ಸಹಕಾರ ಅಗತ್ಯವಿದೆ. ಇದರಿಂದ ಮುಂಬರುವ ವಿದ್ಯಾರ್ಥಿಗಳಿಗೂ ಪ್ರೇರಣೆ ನೀಡಿದಂತಾಗುತ್ತದೆ ಎಂದರು.

ಸನ್ಮಾನಿತ ವಿದ್ಯಾರ್ಥಿಗಳು: ಪ್ರೀತಮ್ ಸಂ. ಮುಖೆ (ಶೇ.96), ಕೋಮಲ್ ಸಂ. ಭೋಸಲೆ (ಶೇ.93), ವಾಸಂತಿ ಅ. ವಾಗ್ಮೊರೆ (ಶೇ.92), ಶಿಲ್ಪಾ ಶಿ. ಅಡೇಕರ (ಶೇ.91) ಅಂಕ ಪಡೆದು ಉನ್ನತ ಶ್ರೇಣಿಯಲ್ಲಿ ಪಾಸಾದ ಈ ವಿದ್ಯಾರ್ಥಿಗಳನ್ನು ಸಮಾಜದ ಮುಖಂಡರು, ಗಣ್ಯರು ಸನ್ಮಾನಿಸಿ ಗೌರವಿಸಲಾಯಿತು.

ಸಮಾಜದ ಪ್ರಮುಖರಾದ ಎಸ್.ಎಮ್.ಗಾಯಕವಾಡ, ಅನೀಲ ವಾಗ್ಮೋರೆ, ಸಂಜು ಮುಖೆ, ರಾಮು ಕಾಳೆ, ವಾಸು ಭೋಸಲೆ, ಮಹಾದೇವ ಗಾಯಕವಾಡ, ಎಸ್.ಎನ್.ಅಡೇಕರ, ಎಸ್.ಎನ್. ಬೂದಿಹಾಳ, ಪತ್ರಕರ್ತ ಬಿ.ಎಚ್.ಬೀಳಗಿ ಸೇರಿದಂತೆ ಇತರರು ಉಪಸ್ಥಿತರಿದ್ದರು.

ಪರುಶರಾಮ ವಾಗ್ಮೋಡೆ ನಿರುಪಿಸಿದರು, ಶಿವಾಜಿ ಅಡೇಕರ ಸ್ವಾಗತಿಸಿದರು, ವಿದ್ಯಾರ್ಥಿನಿ ಪ್ರಾರ್ಥಿಸಿದಳು, ಪಾಂಡು ಕಾಳೆ ವಂದಿಸಿದರು.



ಬಂಡ ವಾಳಿಗರು ಬಡವರನ್ನು ನಿರ್ಗತಿ ಕರನ್ನಾಗಿಸಿ ಹಣದ ರುಜುವಾತಿಗೆ ಹೆಣದ ಸಾಕ್ಷಿ ಕೇಳುವ ಅಟ್ಟಹಾಸ ಹೆಚ್ಚಾಗಿದೆ. ದೌರ್ಜನ್ಯ ಎದುರಿಸಿ ಮಾನವೀಯತೆ ಉಳಿಸು ವುದೇ ಕವಿಯ ಧ್ಯೇಯವಾಗಲಿ. ಕವಿ ಮಹಾದೇವ ಜಗತಾಪ ನೋವು ನಲಿವು ಕಾವ್ಯದ ರೂಪಕ್ಕೆ ಇಳಿಸಿ ಸಮಾಜದಲ್ಲಿ ಅದನ್ನು ಪರಿಚಯಿಸುವ ಕಾರ್ಯ ಮಾಡಿದ್ದಾರೆ

• **ಡಾ.ಸಣ್ಣವೀರಣ್ಣ ದೊಡ್ಡಮನಿ** ಸಂಶೋಧಕ

ಇಂದು ತೋವಿವಿಯಲ್ಲಿ ಮತ ಎಣಿಕೆ; ನಿಷೇಧಾಜ್ಞೆ ಜಾರಿ

ಬಾಗಲಕೋಟೆ ಉಪಚುನಾವಣೆ ಮತ ಎಣಿಕೆಗೆ ಸಕಲ ಸಿದ್ಧತೆ

• **ಕನ್ನಡಪ್ರಭ ವಾರ್ತೆ** ಬಾಗಲಕೋಟೆ

ಬಾಗಲಕೋಟೆ ವಿಧಾನಸಭಾ ಉಪ ಚುನಾವಣೆಗೆ ಸಂಬಂಧಿಸಿದಂತೆ ಮೇ 4ರಂದು ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯದಲ್ಲಿ ಬೆಳಗ್ಗೆ 8ರಿಂದ ಮತ ಎಣಿಕೆ ಕಾರ್ಯ ನಡೆಯಲಿದ್ದು, ಜಿಲ್ಲಾಡಳಿತ ಸಕಲ ಸಿದ್ಧತೆ ಮಾಡಿಕೊಂಡಿದೆ.

ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯದಲ್ಲಿ ಬೆಳಗ್ಗೆ 8 ಗಂಟೆಗೆ ಮತ ಎಣಿಕೆ ಪ್ರಾರಂಭವಾಗಲಿದ್ದು, ಅಭ್ಯರ್ಥಿಗಳು, ಚುನಾವಣೆ ಏಜೆಂಟರು ಹಾಗೂ ಮತ ಎಣಿಕೆ ಏಜೆಂಟರು ಬೆಳಗ್ಗೆ 7 ಗಂಟೆಗೆ ಹಾಜರಿರಲು ತಿಳಿಸಲಾಗಿದೆ. ಭದ್ರತಾ ಕೊಠಡಿಯನ್ನು ಬೆಳಗ್ಗೆ 7 ಗಂಟೆಗೆ ಚುನಾವಣೆ ವೀಕ್ಷಕರ, ಅಭ್ಯರ್ಥಿ ಗಳ, ಏಜೆಂಟರ ಸಮ್ಮುಖದಲ್ಲಿ ತೆರೆಯಲಾಗುತ್ತಿದೆ.

ಇವಿಎಂ ಮತ ಎಣಿಕೆ ಕಾರ್ಯಕ್ಕಾಗಿ ನೆಲ ಮಹಡಿಯ ರೂಮ್ ನಂ.4ರಲ್ಲಿ 14 ಟೇಬಲ್ ವ್ಯವಸ್ಥೆ ಮಾಡಲಾಗಿದೆ. ಅಂಚೆ ಮತಪತ್ರಗಳ ಎಣಿಕೆಗಾಗಿ ನೆಲ ಮಹಡಿಯ 9ರ ಕೊಠಡಿಯಲ್ಲಿ ಒಂದು ಟೇಬಲ್ ಹಾಗೂ ಇಟಿಪಿಬಿಎಸ್ ಸ್ಕ್ಯಾನಿಂಗ್‌ಗಾಗಿ ಕೊಠಡಿ ಸಂ.9ರಲ್ಲಿ ಒಂದು ಟೇಬಲ್ ವ್ಯವಸ್ಥೆ ಮಾಡಲಾಗಿದೆ. ಪ್ರತಿ ಟೇಬಲ್‌ಗೆ ತಲಾ ಒಬ್ಬರು ಎಣಿಕೆ ಮೇಲ್ವಿಚಾರಕ, ಎಣಿಕೆ ಸಹಾಯಕ ಹಾಗೂ ಮೈಕ್ರೋ ಅಬ್ಸರ್ವರ್‌ನೇಮಕ ಮಾಡಲಾಗಿದೆ. ಪ್ರತಿ ಟೇಬಲ್‌ಗೆ ಓರ್ವ ಸಹಾಯಕ ಚುನಾವಣಾಧಿಕಾರಿಗಳು ಇರಲಿದ್ದಾರೆ.

ಸೇವಾ ಮತದಾರರಿಂದ ಸ್ವೀಕರಿಸಲ್ಪಡುವ ಅಂಚೆ ಮತಪತ್ರಗಳ ಕ್ಯೂಆರ್‌ಕೋಡ್ ಸ್ಕ್ಯಾನಿಂಗ್ ಸಲುವಾಗಿ ಒಂದು ಟೇಬಲ್ ಮಾಡಲಾಗಿದ್ದು, ಓರ್ವ ಸ್ಕ್ಯಾನಿಂಗ್ ಮೇಲ್ವಿಚಾರಕರು, ಓರ್ವ ಅಸಿಸ್ಟಂಟ್ ಹಾಗೂ ಇಬ್ಬರು ಸಹಾಯಕ ಚುನಾವಣಾಧಿಕಾರಿಗಳನ್ನು ನೇಮಿಸಲಾಗಿದೆ. ಕಾಯ್ದಿಟ್ಟ ಸಿಬ್ಬಂದಿ ಸೇರಿದಂತೆ ಎಣಿಕೆ ಕಾರ್ಯಕ್ಕೆ ಒಟ್ಟು 63 ಸಿಬ್ಬಂದಿ ನಿಯೋಜನೆ ಮಾಡಲಾಗಿದೆ. ಮತ ಎಣಿಕೆ ಕೇಂದ್ರದಲ್ಲಿಸುತ್ತುವಾರು ಮತಎಣಿಕೆಯಾದ ವಿವರವನ್ನು ಪಬ್ಲಿಕ್ ಅಡ್ರೆಸ್ ಸಿಸ್ಟಮ್ ವ್ಯವಸ್ಥೆ ಮಾಡಲಾಗಿದೆ

ಅಭ್ಯರ್ಥಿ, ಅಭ್ಯರ್ಥಿ ಏಜೆಂಟರಿಗೆ ಮತ ಎಣಿಕೆ ಪೂರ್ವ ದಿಕ್ಕಿನಲ್ಲಿ ಪ್ರತ್ಯೇಕ ಪಾರ್ಕಿಂಗ್ ವ್ಯವಸ್ಥೆ ಮಾಡಲಾಗಿದೆ. ಮತ ಎಣಿಕೆ ಏಜೆಂಟರಿಗೆ ಮುಖ್ಯ ದ್ವಾರದಲ್ಲಿ ಪ್ರವೇಶ ಇರುವುದಿಲ್ಲ. ಸದರಿ ವಾಹನಗಳಿಗೆ ಮುಖ್ಯದ್ವಾರದ 200 ಮೀಟರ್‌ಮುಂಚಿತವಾಗಿ ಇರುವ ಜಿಲ್ಲಾ ಪಶು ಸಂಗೋಪನಾ ಆಸ್ಪತ್ರೆ ಎದುರುಗಡೆ ಹೋಗುವ ರಸ್ತೆ ಮುಖಾಂತರ ಮತ ಎಣಿಕೆ ಕೇಂದ್ರದಿಂದ ಸುಮಾರು 200 ಮೀಟರ್‌ಅಂತರದಲ್ಲಿ ಪಾರ್ಕಿಂಗ್ ವ್ಯವಸ್ಥೆ ಕಲ್ಪಿಸಲಾಗಿದೆ. ಮತ ಎಣಿಕೆ ಸಿಬ್ಬಂದಿಗೆ ಹಾಗೂ ಮಾಧ್ಯಮದವರಿಗೆ ಮಾತ್ರ ಮುಖ್ಯ ದ್ವಾರದಿಂದ ಪ್ರವೇಶವಿರುತ್ತದೆ. ಎಣಿಕೆ ಕೇಂದ್ರದಲ್ಲಿ ಮೊಬೈಲ್ ಫೋನ್ ನಿರ್ಬಂಧಿಸಲಾಗಿದೆ



ನಿಷೇಧಾಜ್ಞೆ ಜಾರಿ

ಮೇ 4ರ ಬೆಳಗ್ಗೆ 6 ಗಂಟೆಯಿಂದ ಮೇ 5ರ ಬೆಳಗ್ಗೆ 6 ಗಂಟೆವರೆಗೆ ಭಾರತೀಯ ನಾಗರಿಕ ಸುರಕ್ಷಾ ಸಂಹಿತೆ 2023ರ ಕಲಂ 163ನ್ನು ಜಾರಿ ಮಾಡಿ ಆದೇಶಿಸಲಾಗಿದೆ. ಅಲ್ಲದೇ ಬಾಗಲಕೋಟೆ ವಿಧಾನಸಭಾ ಮತಕ್ಷೇತ್ರದ 10 ಕಿ.ಮೀ ವ್ಯಾಪ್ತಿಯಲ್ಲಿ ಮೇ 4ರ ಬೆಳಗ್ಗೆ 6 ರಿಂದ ಮಧ್ಯರಾತ್ರಿ 12 ಗಂಟೆವರೆಗೆ ಮದ್ಯದಂಗಡಿ, ಬಾರ್ ಮತ್ತು ರೆಸ್ಟೋರೆಂಟ್, ಹೋಟೆಲ್, ಕ್ಲಬ್, ಢಾಬಾ ಮತ್ತು ಇನ್ನಿತರ ಸ್ಥಳಗಳಲ್ಲಿ ಮದ್ಯ ಮಾರಾಟ ಹಾಗೂ ಸರಬರಾಜು ಮಾಡುವುದನ್ನು ನಿಷೇಧಿಸಿ ಆದೇಶ ಹೊರಡಿಸಲಾಗಿದೆ.

ನಗುತ್ತಿದ್ದರೆ ಅದೇ ಸ್ವರ್ಗ, ನಗು ಆರೋಗ್ಯದ ಗುಟ್ಟು

ವಿಶ್ವ ನಗುವಿನ ದಿನಾಚರಣೆಯಲ್ಲಿ ಹಿರಿಯ ಹಾಸ್ಯ ಸಾಹಿತಿ ರಬಕವಿಯ ಯಶವಂತ ವಾಜಂತ್ರಿ ಅಭಿಮತ

• **ಕನ್ನಡಪ್ರಭ ವಾರ್ತೆ** ರಬಕವಿ-ಬನಹಟ್ಟಿ

ನಗುವು ಬದುಕಿನ ಒತ್ತಡ ಕಡಿಮೆ ಮಾಡಿ ರೋಗನಿರೋಧಕ ಶಕ್ತಿ ವೃದ್ಧಿಸುವ ಜೊತೆಗೆ ದೈಹಿಕ ಹಾಗೂ ಮಾನಸಿಕ ಆರೋಗ್ಯವನ್ನೂ ಸಶಕ್ತಗೊಳಿಸುತ್ತದೆಂದು ಹಿರಿಯ ಹಾಸ್ಯ ಸಾಹಿತಿ ರಬಕವಿಯ ಯಶವಂತ ವಾಜಂತ್ರಿ ಹೇಳಿದರು.



ರಬಕವಿಯ ಅವರ ನಿವಾಸದ ಆವರಣದಲ್ಲಿ ಭಾನುವಾರ ಹಮ್ಮಿಕೊಂಡ ವಿಶ್ವನಗುವಿನ ದಿನದ ನಿಮಿತ್ತ ಏರ್ಪಡಿಸಿದ್ದ ಸಮಾರಂಭದಲ್ಲಿಅವರುಮಾತನಾಡಿದರು. ನಗು ನಮಗೆ ದೇವರು ನೀಡಿದ ವರದಾನ. ಅದೆಂತಹ ಬೇಜಾರು ಇದ್ದರೂ ಒಂದು ಸುಂದರವಾದ ನಗುವಿನ ಮೂಲಕ ಅದನ್ನು ದೂರ ಮಾಡಬಹುದು. ಅದಕ್ಕೆ ಕೆಲವು ಕವಿಗಳು ನಗು ನಗುತಾ ನಲಿ ನಲಿ ಏನೇ ಆಗಲಿ ಎಂದು ಹೇಳಿರುವುದು, ನಗುವಿನಲ್ಲಿ ಅಷ್ಟೊಂದು ಶಕ್ತಿಯಿದೆ. ನಗುವುದು ಒಂದು ಕಲೆಯಾದರೆ, ನಗಿಸುವುದು ಇನ್ನೊಂದು ಕಲೆ. ಈ ಕಲೆ ಎಲ್ಲರಿಗೂ ಸಿದ್ಧಿಸುವುದಿಲ್ಲ. ಆದ್ದರಿಂದಲೇ ತಾ ನಗಿಸಿ, ನಗುತಾ, ನಗಿಸುವ ಬಾಳು ನಿಮ್ಮದಾಗಲಿ ಎಂದೇ ಹಿರಿಯರುನಮ್ಮನ್ನುಆಶೀರ್ವಾದಿಸುತ್ತಾರೆ. ಈ ನಗುವಿಗೆ ಒಂದು ರೀತಿಯ ಧನಾತ್ಮಕ ಶಕ್ತಿಯಿದೆ, ಎಂಥ ಸಮಸ್ಯೆಯನ್ನೂ ಪರಿಹರಿಸುವ ಶಕ್ತಿಯಿದೆ. ಈ ನಗುವಿನ ಮಹತ್ವವನ್ನು ಗಮನಿಸಿಯೇ ಕೆಲವರು ನಗುವಿಗಾಗಿಯೇ ಒಂದು ದಿನವನ್ನು ಮೀಸಲಾಗಿಟ್ಟಿದ್ದಾರೆ. ಪ್ರತಿವರ್ಷ ಮೇ ತಿಂಗಳ ಮೊದಲನೆ ಭಾನುವಾರವನ್ನು ವಿಶ್ವ ನಗು ದಿನವನ್ನಾಗಿ ಆಚರಿಸಲಾಗುತ್ತದೆ. ಈ ಬಾರಿ ಮೇ 3 ರಂದು ನಗು ದಿನವನ್ನಾಗಿ ಆಚರಿಸಲಾಗುತ್ತದೆ ಎಂದು ಹೇಳಿದ್ದಾರೆ.

ಹಾಸ್ಯ ಕಲಾವಿದ ವೇ.ಮೂ.ವಸ್ತ್ರದ ಬಸಯ್ಯನವರು ಮಾತನಾಡಿ, ಮೊದಲ ಬಾರಿಗೆ ವಿಶ್ವ ನಗು ದಿನವನ್ನು 1998, ಜನವರಿ 10ರಂದು ಮುಂಬಯಿನಲ್ಲಿ ಆಚರಿಸಲಾಯಿತು. ಡಾ.ಮದನ್ ಕಟಾರಿಯಾ ಮೊದಲ ಬಾರಿಗೆ ಆರಂಭಿಸಿದರು. ವಿಶ್ವ ನಗು ಯೋಗ ಅಭಿಯಾನದ ಸಂಸ್ಥಾಪಕರಾದ ಇವರು ನಗುವಿಗಿರುವ ಅನನ್ಯ ಶಕ್ತಿ ಗಮನಿಸಿ ಇಂಥದ್ದೊಂದು ದಿನ ಆರಂಭಿಸಿದರು. ನಗುವಿನಿಂದ ಇಡೀ ವಿಶ್ವವನ್ನೇ ಶಾಂತಿಯುತವಾಗಿ ಹಾಗೂ ಧನಾತ್ಮಕವಾಗಿ ಬದಲಾಯಿಸಬಹುದು ಎಂಬ ನಂಬಿಕೆ ಇವರದ್ದು. ಈಗ ಈ ದಿನವನ್ನು ವಿಶ್ವದ ಎಲ್ಲಾ ರಾಷ್ಟ್ರಗಳು ಆಚರಿಸುತ್ತವೆ. ನಗುವುದು ಮತ್ತು ನಗಿಸುವುದು ಆರೋಗ್ಯಕರ ಬೆಳವಣಿಗೆಗಳು ಎಂದರು. ಸಮಾರಂಭದಲ್ಲಿ ಡಾ. ಸಂಗಮೇಶ ಹತಪಾಕಿ, ಈರಣ್ಣ ಗುಣಕಿ ಸೇರಿದಂತೆ ಅನೇಕ ಮಹಿಳೆಯರು, ವಿದ್ಯಾರ್ಥಿಗಳು ಇದ್ದರು.

ಸುದ್ದಿ ಸಿಂಚನ

ವಿದ್ಯಾಪೋಷಕ ಧನ ಸಹಾಯಕ್ಕಾಗಿ ಅರ್ಜಿ

ಬಾದಾಮಿ: ಆರ್ಥಿಕ ಸಂಕಷ್ಟದಲ್ಲಿರುವ ಅರ್ಹ ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಧಾರವಾಡದ ವಿದ್ಯಾಪೋಷಕ ಸಂಸ್ಥೆಯು ನರ್ಚರ್‌ಮೆರಿಟ್ ಯೋಜನೆಯಡಿ 2026-27 ನೇ ಸಾಲಿಗಾಗಿ ಆರ್ಥಿಕ ಸಹಾಯ ನೀಡಲು ಅರ್ಜಿಗಳನ್ನು ಆಹ್ವಾನಿಸಿದೆ.2026ರ ಸಾಲಿನಲ್ಲಿ ಎಸ್.ಎಸ್.ಎಲ್.ಸಿ.ಪರೀಕ್ಷೆಯಲ್ಲಿ ಶೇ.80ರಷ್ಟು ಅಂಕ ಪಡೆದು ಪ್ರಥಮ ಪಿಯುಸಿ ವಾಣಿಜ್ಯ, ಡಿಪ್ಲೊಮಾ ಪ್ರವೇಶ ಪಡೆಯಬಯಸುವ ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಬಹುದು. ಕುಟುಂಬದ ಮಾಸಿಕ ವರಮಾನ ₹10 ಸಾವಿರಕ್ಕಿಂತ ಕಡಿಮೆ ಇರುವ ಬಾಗಲಕೋಟೆ ಜಿಲ್ಲೆಯ ಅರ್ಹ ವಿದ್ಯಾರ್ಥಿಗಳು ಮೇ 30ರೊಳಗೆ ವಿದ್ಯಾಪೋಷಕ ವೆಬ್ ಸೈಟ್ www.vidyaposhak.ngo ನಲ್ಲಿ ಆನ್ ಲೈನ್ ಮೂಲಕ ಅರ್ಹ ಅಗತ್ಯ ದಾಖಲೆಗಳೊಂದಿಗೆ ಅರ್ಜಿ ಸಲ್ಲಿಸಬಹುದು. ಹೆಚ್ಚಿನ ಮಾಹಿತಿಗಾಗಿ ವಕೀಲ ಎಂ.ಎಸ್.ಹಿರೇಮಠ ಮೊ:9740332482 ಸಂಪರ್ಕಿಸಬಹುದು.

ಮುಂಗಾರು, ಹಿಂಗಾರು ಉತ್ತಮ ಮಳೆ, ಬೆಳೆ



ಅಮೀನಗಡ: ಸಮೀಪದ ಗುಡೂರ(ಎಸ್.ಸಿ) ಗ್ರಾಮದಲ್ಲಿ ಜರುಗಿದ ಶ್ರೀ ಹುಲ್ಲೇಶ್ವರ ಜಾತ್ರಾ ಮಹೋತ್ಸವದಲ್ಲಿ ಕಾರಣಿಕ ಗಿರಿಯಪ್ಪಜ್ಜಯ್ಯ ಮಳ್ಳಯ್ಯನವರು ವಾಡಿಕೆಯಂತೆ ಎತ್ತರವಾದ ಹುಣಿಸೆ ಮರವೇರಿ ಮುಂಗಾರು ಹಿಂಗಾರಿನ ಮಳೆ,ಬೆಳೆಯ ಭವಿಷ್ಯವಾಣಿ ನುಡಿದರು. ಬೆಲಗ್ಗೆ ಗಣಪತಿ ಪೂಜೆಯೊಂದಿಗೆ ಗ್ರಾಮದ ಎಲ್ಲ ದೇವರುಗಳಿಗೆ ಪೂಜೆ ನೆರವೇರಿತು. ಗಂಗಿಮಾಳಮ್ಮ ತಾಯಿಗೆ ಮುತ್ತೈದೆಯರು ಉಡಿತುಂಬಿದರು. ಸಂಜೆ ಗಂಡಾರತಿ ಯೊಂದಿಗೆ ಡೊಳ್ಳು, ಜಾಗಟೆ, ಸಮ್ಮಾಳ, ಕಣಿ ಮಂಗಳವಾದ್ಯಗಳೊಂದಿಗೆ ವೀರಭದ್ರಸ್ವಾಮಿ, ಹುಲ್ಲೇಶ್ವರ ದೇವರಮೂರ್ತಿ ಕುದುರೆ, ಖಡ್ಗಹೊತ್ತುಕೊಂತ ಸಿದ್ಧಗೊಳಿಸಿ ಕಾರಣಿಕ ಗಿರಿಯಪ್ಪಜ್ಜನವರು ಉಗ್ರ ಸ್ವರೂಪ ತಾಳಿ ಭಂಡಾರಧರಿಸಿ ನುಡಿ ಹೇಳಿದರು. ಇವರೊಂದಿಗೆ ಹುಲ್ಲಪ್ಪಜ್ಜ, ಚಂದಾಲಿಂಗಪ್ಪಜ್ಜ, ದೇಸಾಯಿ, ಪೊಲೀಸ್‌ಗೌಡ್ರು, ದೇಶಪಾಂಡೆ, ಕುಲಕರ್ಣಿ, ಮೇಟಿ ಹಾಗೂ ಪ್ಯಾಟಿಗೌಡ್ರು ಮುಂತಾದವರು ಏಳುಕೋಟಿ ಏಳುಕೋಟಿ ಎಂದು ಘೋಷಣೆ ಮೊಳಗಿಸಿದರು. ದೇವಸ್ಥಾನದ ಆಡಳಿತಗಾರರಾದ ಉಪ ತಹಸೀಲ್ದಾರ್ ಮೋಹನ ಹೆಬ್ಬಳ್ಳಿ ಹಾಗೂ ದೇವಸ್ಥಾನ ಆಡಳಿತ ಮಂಡಳಿ ಜಾತ್ರೆಯ ಧಾರ್ಮಿಕ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು. ಗುಡೂರ, ಚಿಕನಾಳ, ವಡಗೇರಿ, ಧಮ್ಮೂರ, ಭೀಮನಗಡ, ಮುರಡಿ, ನಿಲೂಗಲ್, ಹನುಮನಾಳ, ಕೆಲೂರ, ಅಮೀನಗಡ, ಐಹೊಳೆ ಮತ್ತಿತರ ಗ್ರಾಮಗಳಿಂದ ಅಪಾರ ಸಂಖ್ಯೆಯಲ್ಲಿ ಭಕ್ತರು ಪಾಲ್ಗೊಂಡಿದ್ದರು.

ಶಿಸ್ತುಬದ್ಧ ಪರೀಕ್ಷೆಗೆ ಸಕಲರ ಸಹಕಾರ ಅವಶ್ಯ



ಬಾಗಲಕೋಟೆ: ಜಮಖಂಡಿಯ ಬಾಗಲಕೋಟ ವಿಶ್ವವಿದ್ಯಾಲಯದ 2, 4 ಹಾಗೂ 6ನೇ ಸೆಮಿಸ್ಟರ್ ಬಿಎ, ಬಿಕಾಂ ಮತ್ತು ಬಿಸಿಎ ಪದವಿ ಪರೀಕ್ಷೆಗಳು ಮೇ 4 ರಿಂದ ಜೂನ್ 10ರವರೆಗೆ ನಡೆಯಲಿದ್ದು, ಪರೀಕ್ಷೆಯನ್ನು ಸುಗಮವಾಗಿ ನಡೆಸಲು ಅವಶ್ಯಕ ಸಿದ್ಧತೆ ಮಾಡಿಕೊಳ್ಳಲಾಗುತ್ತಿದೆ ಎಂದು ಪ್ರಾಚಾರ್ಯ ಶ್ರೀನಿವಾಸ ನರಗುಂದ ಹೇಳಿದರು. ನಗರದ ವಿದ್ಯಾ ಪ್ರಸಾರಕ ಮಂಡಳದ ಎಸ್.ಆರ್. ನರಸಾಪೂರ ಕಲಾ ಹಾಗೂ ಎಂ.ಬಿ. ಶಿರೂರ ವಾಣಿಜ್ಯ ಮಹಾವಿದ್ಯಾಲಯದಲ್ಲಿ ನಡೆದ ಪರೀಕ್ಷಾ ಪೂರ್ವಭಾವಿ ಸಭೆಯಲ್ಲಿ ಮಾತನಾಡಿದ ಅವರು, ಪರೀಕ್ಷೆಗಳು ವ್ಯವಸ್ಥಿತವಾಗಿ ನಡೆಯಬೇಕು. ವಿದ್ಯಾರ್ಥಿಗಳು ಪರೀಕ್ಷೆಯಲ್ಲಿ ಶಿಸ್ತಿನಿಂದ ವರ್ತಿಸುವಂತೆ ಸಿಬ್ಬಂದಿ ನೋಡಿಕೊಳ್ಳಬೇಕು. ಈಗಾಗಲೇ ಈ ವಿಷಯವಾಗಿ ವಿದ್ಯಾರ್ಥಿಗಳಲ್ಲಿ ಅರಿವನ್ನು ಮೂಡಿಸಲಾಗಿದೆ. ಶಿಸ್ತುಬದ್ಧ ಹಾಗೂ ಉತ್ತಮರೀತಿಯಲ್ಲಿ ಪರೀಕ್ಷೆಗಳು ನಡೆಯಲು ಸಕಲರ ಸಹಕಾರಅವಶ್ಯವಾಗಿದೆಎಂದರು. ಗ್ರಂಥಪಾಲಕಡಿ. ಎಚ್.ಬಿರಾದಾರ,ಎಫ್.ಡಿ.ಎರ್ಆ.ಎಸ್. ಚವ್ಹಾಣ, ಶಿಕ್ಷಕ-ಶಿಕ್ಷಕೇತರ ಸಿಬ್ಬಂದಿ ಸಭೆಯಲ್ಲಿ ಪಾಲ್ಗೊಂಡರು.

ಜ್ಞಾನದ ಹಸಿವಿದ್ದವರಿಗೆ ಬಡತನ ಅಡ್ಡಿಯಾಗದು

ಸ್ನೇಹ ಸಮ್ಮಿಲನ,ಗುರುವಂದನೆ ವೇಳೆ ಬನಹಟ್ಟಿ ಹಿರೇಮಠದ ಶರಣಬಸವ ಶಿವಾಚಾರ್ಯರ ಅಭಿಪ್ರಾಯ

• **ಕನ್ನಡಪ್ರಭ ವಾರ್ತೆ** ರಬಕವಿ-ಬನಹಟ್ಟಿ

ಜ್ಞಾನದ ಹಪಾಹಪಿ ಇರುವ ಪ್ರತಿಭೆಗೆ ಬಡತನ ಎಂದಿಗೂ ಅಡ್ಡಿಯಾಗದು. ಅಂಥ ಪ್ರತಿಭೆಗಳು ಸಹಾಯದ ಕೊರತೆಯಿಂದ ಕಮರಕೂಡದು ಮತ್ತು ಪ್ರತಿಭಾವಂತರ ಸೇವೆ ಸಮಾಜಕ್ಕೆ, ದೇಶಕ್ಕೆ ದೊರೆಯುವತ್ತ ಎಲ್ಲರೂ ನೆರವು, ಸಹಕಾರ ನೀಡುವ ಮೂಲಕ ಬೆಳೆಸುವುದು ಪ್ರಶಂಸಾರ್ಹವೆಂದು ಬನಹಟ್ಟಿ ಹಿರೇಮಠದ ಶರಣಬಸವ ಶಿವಾಚಾರ್ಯರು ನುಡಿದರು.

ಬನಹಟ್ಟಿಯ ಎಸ್‌ಆರ್‌ಎ ಪ್ರೌಢಶಾಲೆಯ 1988-89ನೇ ಸಾಲಿನ ವಿದ್ಯಾರ್ಥಿಗಳು ಲಕ್ಷ್ಮೀದೇವಿ ಸಮುದಾಯ ಭವನದಲ್ಲಿ ಆಯೋಜಿಸಿದ್ದ ಸ್ನೇಹ ಸಮ್ಮಿಲನ ಹಾಗೂ ಗುರುವಂದನಾ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ತಮ್ಮದೆ ಗೆಳೆಯರ ಬಳಗದಲ್ಲಿನ ಸಹಪಾಠಿಯಾಗಿದ್ದ ವರ್ಧಮಾನ ಯಲಗುದ್ರಿ ಎಂಬುವವರು ಬಡಸ್ನೇಹಿತನ ಮಗನ ಜ್ಞಾನಾರ್ಜನೆ ಸಲುವಾಗಿ ಪ್ರತಿ ವರ್ಷ ₹5 ಸಾವಿರ ಸಹಾಯ ಧನ, ಮತ್ತೆ ಕೆಲವರು ಕುಟುಂಬಗಳಿಗೆ ಉದ್ಯೋಗ ಸೃಷ್ಟಿ ಜೊತೆಗೆ ಇತರೆ ಸಹಾಯ ನೀಡುವ ಮೂಲಕ ಆರ್ಥಿಕವಾಗಿ ದುರ್ಬಲರಿಗೆ ಉಳ್ಳವರು ಸಹಾಯ ಮಾಡುವ ಮೂಲಕ ಅರ್ಥಪೂರ್ಣ ಕಾರ್ಯಕ್ರಮ ಮಾಡಿದ್ದಾರೆ ಎಂದು ಹೇಳಿದರು.

37 ವರ್ಷಗಳ ನಂತರ ಸೇರಿದ್ದ ಹಳೆಯ ವಿದ್ಯಾರ್ಥಿಗಳು ತಮ್ಮ ಶಾಲಾ ದಿನಗಳ ಸಿಹಿ ನೆನಪುಗಳನ್ನು ಹಂಚಿಕೊಂಡು ಹಳೆಯ ಸ್ನೇಹವನ್ನು ಜೀವಂತಗೊಳಿಸಿದರು. ಕೆಲ ಸಂದರ್ಭಗಳಲ್ಲಿ ಭಾವನಾತ್ಮಕ ಕ್ಷಣಗಳೂ ಸಾಕ್ಷಿಯಾದವು.



ಬನಹಟ್ಟಿಯ ಎಸ್‌ಆರ್‌ಎ ಪ್ರೌಢಶಾಲೆಯ 1988-89ನೇ ಸಾಲಿನ ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿಗಳ ಗುರುವಂದನೆ ಕಾರ್ಯಕ್ರಮವನ್ನು ಶ್ರೀಗಳು ಉದ್ಘಾಟಿಸಿದರು.

ಸಾನ್ನಿಧ್ಯ ವಹಿಸಿದ್ದ ಶರಣಬಸವ ಶಿವಾಚಾರ್ಯರು ಮಾತನಾಡಿ, ಗುರುಗಳ ಸ್ಮರಣೆ ನಿರಂತರವಾಗಿರಬೇಕು. ಶಿಷ್ಯವೃಂದ ಸಾಧನೆ ಮಾಡಿದಾಗ ಗುರುವಿಗೆ ತೃಪ್ತಿಯಾಗುವದೆಂದರು.

ವೇದಿಕೆ ಮೇಲೆ ಮಕ್ಕಳ ಸಾಹಿತಿ ಜಯವಂತ ಕಾಡದೇವರ, ಅಶೋಕ ಪತ್ತಾರ, ಸಿದ್ಧರಾಮ ಹಾವಿನಾಳ, ಎ.ಸಿ. ಹಳ್ಳಿ, ಕಲಾದಗಿ ಉಪಸ್ಥಿತರಿದ್ದರು. ವಿದ್ಯಾರ್ಥಿಗಳ ಸಾಧನೆಗೆ ಹರ್ಷ ವ್ಯಕ್ತಪಡಿಸಿದ ಗುರುಗಳು, ಅವರ ಭವಿಷ್ಯ ಉಜ್ವಲವಾಗಿರಲೆಂದು ಆಶೀರ್ವದಿಸಿದರು.

ಕಾರ್ಯಕ್ರಮದ ಅಂಗವಾಗಿ ವಿದ್ಯಾರ್ಥಿಗಳ ಭಾಷಣ, ಅನುಭವ ಹಂಚಿಕೆ ಮತ್ತು ಸ್ನೇಹಮಿಲನ ಮಾತುಕತೆ ನಡೆಯಿತು. ಪವನ ಲಡ್ಡಾ, ಕಾಡು ಹಳಿಂಗಳಿ, ಮಲ್ಲಿಕಾರ್ಜುನ ಕುಂಚನೂರ, ಬಸವರಾಜ ಅಮಟಿ, ಬಾಬು ಕಿತ್ತೂರ, ಪ್ರಶಾಂತ ಸೊರಗಾಂವಿ, ಸುಭೋದ ಕೋಪರ್ಡೆ, ಮಲ್ಲು ಕುಳ್ಳಿ, ಬುದ್ನಿ, ಪ್ರಕಾಶ ಭೂತಿ, ಸುಜಾತಾ ಯಾದವಾಡ, ಉಜ್ವಲಾ ಬಾಣಕಾರ, ಭಾರತಿ ಜಾಡಗೌಡ, ಅನಿತಾ ಕೋಲಾರ, ದ್ರಾಕ್ಷಾಯಿಣಿ ಹುನ್ನೂರ, ಮೊಳೆಗಾಂವಿ ಸೇರಿದಂತೆ ಅನೇಕರಿದ್ದರು.

ವಿಶ್ವಭಾರತಿ ಅಂತಾರಾಷ್ಟ್ರೀಯ ಶಾಲೆ ಉದ್ಘಾಟನೆ ನಾಳೆ

• **ಕನ್ನಡಪ್ರಭ ವಾರ್ತೆ**
ರಬಕವಿ-ಬನಹಟ್ಟಿ

ತಾಲೂಕಿನ ಯಲ್ಲಟ್ಟಿಯಲ್ಲಿ ಜಗಜ್ಯೋತಿ ಶಿಕ್ಷಣ ಮತ್ತು ಗ್ರಾಮೀಣಾಭಿವೃದ್ಧಿ ಸಂಸ್ಥೆಯ ವಿಶ್ವಭಾರತಿ ಅಂತರಾಷ್ಟ್ರೀಯ ಶಾಲೆ ಕಟ್ಟಡ ಉದ್ಘಾಟನೆ ಸಮಾರಂಭವು ಮೇ 5ರಂದು ಬೆಳಿಗ್ಗೆ 10ಕ್ಕೆ ಜರುಗಲಿದೆಯೆಂದು ಆಡಳಿತ ಮಂಡಳಿ ನಿರ್ದೇಶಕ ಕಿರಣ ಭದ್ರನ್ನವರ ತಿಳಿಸಿದರು.

ಯಲ್ಲಟ್ಟಿಯ ಕುಡಚಿ-ಜಮಖಂಡಿ ರಾಜ್ಯ ಹೆದ್ದಾರಿಗೆ ಅಂಟಿಕೊಂಡಿರುವ ಶಾಲಾ ಆವರಣದಲ್ಲಿ ನಡೆದ ಪೂರ್ವಭಾವಿ ಸಭೆಯಲ್ಲಿ ಮಾತನಾಡಿದ ಅವರು, ಮಂಗಳವಾರ ಜರುಗುವ ಕಾರ್ಯಕ್ರಮದಲ್ಲಿ ಸಾನ್ನಿಧ್ಯವನ್ನು ಶ್ರೀಶೈಲ ಪೀಠದ ಜಗದ್ಗುರು ಡಾ.ಚನ್ನಸಿದ್ಧರಾಮ ಪಂಡಿತಾರಾಧ್ಯ ಶಿವಾಚಾರ್ಯರು ಹಾಗೂ ಗದಗ ಶಿರುಂಜಿಯ ಬಸವ ಸಮರ್ಥ ಸಿದ್ಧೇಶ್ವರ ಶ್ರೀಗಳು ವಹಿಸಲಿದ್ದಾರೆ.

ಸಚಿವ ಆರ್.ಬಿ. ತಿಮ್ಮಾಪೂರ ಉದ್ಘಾಟಿಸಲಿದ್ದು, ಶಾಸಕ ಸಿದ್ದು ಸವದಿ ಅಧ್ಯಕ್ಷತೆ ವಹಿಸಲಿದ್ದಾರೆ. ಸಂಸದ ಪಿ.ಸಿ.



ಗದ್ದಿಗೌಡರ, ಶಾಸಕರಾದ ಪ್ರಕಾಶ ಹುಕ್ಕೇರಿ, ಉಮಾಶ್ರೀ, ಸಿದ್ದು ಕೊಣ್ಣೂರ ಉಪಸ್ಥಿತಿಯಲ್ಲಿ ಎಂ.ಜಿ. ದಾಸರ ವಿಶೇಷ ಉಪನ್ಯಾಸ ನೀಡಲಿದ್ದಾರೆ. ಅತಿಥಿಗಳಾಗಿ ಶಾಸಕರಾದ ಪಿ.ಎಚ್. ಪೂಜಾರ, ಹಣಮಂತ ನಿರಾಣಿ, ಸುನೀಲಗೌಡ ಪಾಟೀಲ, ಪ್ರಾಧಿಕಾರ ಅಧ್ಯಕ್ಷ ದಾನಪ್ಪ ಹುಲಜತ್ತಿ, ಸಿ.ಎಂ. ನ್ಯಾಮಗೌಡ, ಪ್ರೊ. ಬಸವರಾಜ ಕೊಣ್ಣೂರ ಅತಿಥಿಗಳಾಗಿ ಆಗಮಿಸಲಿದ್ದಾರೆ. ಈ ಸಂದರ್ಭ ಸಂಸ್ಥೆ ಅಧ್ಯಕ್ಷ ಸದಾಶಿವ ಸಂತಿ, ಸದಾಶಿವ ಗೌಡಪ್ಪನವರ, ವಸಂತ ಪಾಟೀಲ, ಭಾರತಿ ನ್ಯಾಮಗೌಡ, ಸುಜಾತಾ ಹನಗಂಡಿ, ಅಪ್ಪಜಪ್ಪ ಸಂತಿ, ಗೋಪಾಲ ಲಡ್ಡಾ, ರಾಜು ಕಡಕಭಾಂವಿ, ಮುಖ್ಯಾಧ್ಯಾಪಕ ಗಣೇಶ ಚಿಕ್ಕೊಡ ಉಪಸ್ಥಿತರಿದ್ದರು.

ಶಂಕರ ತಿಗಣಿಗೆ ಅತ್ಯುತ್ತಮ ಶಿಕ್ಷಕ ಪ್ರಶಸ್ತಿಯ ಗರಿ

ತೇರದಾಳ(ರ-ಬ): ಬೆಂಗಳೂರಿನ ಕರುನಾಡ ಕನ್ನಡ ಕಲಾ ಸಿರಿ ಬಳಗ ತೇರದಾಳ ಮೂಲದ ಶಂಕರ ಹನುಮಂತ ತಿಗಣಿ ಅವರು 2026ನೇ ಸಾಲಿನ ಅತ್ಯುತ್ತಮ ಆದರ್ಶ ಶಿಕ್ಷಕ ಪ್ರಶಸ್ತಿಗೆ ಭಾಜನರಾಗಿದ್ದಾರೆ. ಕನ್ನಡ ಭಾಷೆಯ ಉಳಿವನ್ನೇ ಉಸಿರಾಗಿಸಿಕೊಂಡು ಭಾಷೆ ಹಾಗೂ ಹತ್ತಾರು ಕನ್ನಡಪರ ಕಾರ್ಯಗಳನ್ನು ಮಾಡುತ್ತಿರುವ ಮತ್ತು ಪ್ರಸಕ್ತ ಸಾಲಿನಲ್ಲಿ ಎಸ್‌ಎಸ್‌ಎಲ್‌ಸಿ ಹಾಗೂ ಪಿಯೂಸಿ ವಿದ್ಯಾರ್ಥಿಗಳಿಗೆ ಶೇ.95ಕ್ಕಿಂತ ಅಧಿಕ ಅಂಕ ಗಳಿಸಲು ಕಾರಣರಾದ ಕನ್ನಡ ಶಿಕ್ಷಕರನ್ನು ಗುರುತಿಸಿ ಕೊಡಮಾಡುವ 2026ನೇ ಸಾಲಿನ ಅತ್ಯುತ್ತಮ ಆದರ್ಶ ಶಿಕ್ಷಕ ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ ಎಂದು ಸಂಸ್ಥಾಪಕ ಡಾ. ಅಂಬರೀಶ್ ಸಿ.ಎಂ.ತಿಳಿಸಿದ್ದಾರೆ. ಪ್ರಶಸ್ತಿ ವಿಜೇತ ಶಿಕ್ಷಕ ಶಂಕರ ತಿಗಣಿಯವರನ್ನು ತೇರದಾಳ ಪಟ್ಟಣದ ಸಂಘ-ಸಂಸ್ಥೆಗಳ ಧುರೀಣರು, ಪ್ರಮುಖರು ಅಭಿನಂದಿಸಿದ್ದಾರೆ.



ಟ್ರ್ಯಾಕ್ಟರ್ ಜಗ್ಗುವ ಸ್ಪರ್ಧೆ: ಗೌಡ್ರದೊಡ್ಡಪ್ಪ ಪ್ರಥಮ

• **ಕನ್ನಡಪ್ರಭ ವಾರ್ತೆ** ಕಲಾದಗಿ

ಖಜ್ಜಿಡೋಣಿ ಗ್ರಾಮದಲ್ಲಿನ ಶ್ರೀ ಮಹಾಸಾಧ್ವಿಹೇಮರಡ್ಡಿಮಲ್ಲಮಾಂಬೆಯ ಜಾತ್ರಾ ಮಹೋತ್ಸವ ನಿಮಿತ್ತ ಶ್ರೀ ಹೇಮ ವೇಮ ಯುವಕ ಮಂಡಳಿಯ ಸಂಯುಕ್ತಾಶ್ರಯದಲ್ಲಿ 55 ಎಚ್.ಪಿ ಟ್ರ್ಯಾಕ್ಟರ್ ಜಗ್ಗುವ ಸ್ಪರ್ಧೆ ಜರುಗಿತು.

ಬಾಗಲಕೋಟೆ ಬಿಜೆಪಿ ಯುವ ಮುಖಂಡ ಎಚ್.ಪಿ. ಪೂಜಾರ ಉದ್ಘಾಟಿಸಿದರು. ಪ್ರಥಮ ಬಹುಮಾನ ಹೋಂಡಾ ಸೈಕಲ್ ಮೋಟಾರನ್ನು ಗೌಡ್ರದೊಡ್ಡಪ್ಪ ಪಡೆದುಕೊಂಡಿತು. ದ್ವಿತೀಯ ಬಹುಮಾನ ಸ್ಕೂಟಿ ಧಾರವಾಡ ಕುಬೋಟಾ ಪಡೆದುಕೊಂಡಿತು. ತೃತೀಯ ಬಹುಮಾನ ₹20,000 ನಗದು ಹಿಪ್ಪರಗಿ ಹುಲಿ, ಚತುರ್ಥ ಬಹುಮಾನ ₹10,000 ನಗದು ಕೊಣ್ಣೂರ ಕುಬೋಟಾ, ಪಂಚಮ ಬಹುಮಾನ ₹5,000 ನಗದು ಗೌಡರ ಗೂಳಿ ಪಡೆದುಕೊಂಡಿತು.



ತಿಮ್ಮಣ್ಣ ಬಟಕುರ್ಕಿ, ಶ್ರೀಕಾಂತ ಪೂತರೆಡ್ಡಿ, ಸುಭಾಸ್ ಬಟಕುರ್ಕಿ, ಸಿದ್ದು ತಿರಕನ್ನವರ್, ಸಿದ್ದು ಹುಣಸಿಕಟ್ಟಿ, ಬಸವರಾಜ ಮಾಚಕನೂರು, ಬೈಲರಡ್ಡಿ ವಾಸನದ, ರಂಗಪ್ಪ ಆನಂದಿ, ಪವನ ಹರನಟ್ಟಿ, ಪ್ರವೀಣ ಮಾರಂಗಪ್ಪನವರ್, ರಮೇಶ ಮಂಟೂರ, ರಾಜು ತಿರಕನ್ನವರ್, ಸದಾಶಿವ ಮಾರಂಗಪ್ಪನವರ್, ಪ್ರಫುಲ ಸಂಶಿ, ಮಂಜು ವಾಸನದ, ಗಿರೀಶ ರೂಗಿ ಇನ್ನಿತರರು ಇದ್ದರು.

ನಾಳೆ ಅಭಿನಂದನಾ ಗ್ರಂಥ ಬಿಡುಗಡೆ

ಗುಳೇದಗುಡ್ಡ: ಬಿಜೆಪಿ ಮುಖಂಡ ರಂಗಪ್ಪ ಶೇಬಿನಕಟ್ಟಿ ಅವರ 84 ವರ್ಷ ಪೂರೈಸಿದ ನಿಮಿತ್ತ ಅವರಿಗೆ ಅಭಿನಂದನಾ ಸಮಾರಂಭ ಮೇ 5ರಂದು ಕರನಂದಿ ರಂಗಮಂದಿರದಲ್ಲಿ ನಡೆಯಲಿದೆ. ಗಾಯಂತ್ರಿ ಪೀಠ ಮಹಾಸಂಸ್ಥಾನದ ದಯಾನಂದಪುರಿ ಶ್ರೀಗಳು, ಗುರುಸಿದ್ದೇಶ್ವರ ಬೃಹನ್ಮಠದ ಬಸವರಾಜ ಪಟ್ಟದಾರ್ಯ ಶ್ರೀಗಳು, ಗದ್ದನಕೇರಿಯ ಮಳೇರಾಜೇಂದ್ರ ಮಠದ ಭಾಸ್ಕರ ಸ್ವಾಮಿಗಳು ಸಾನ್ನಿಧ್ಯ ವಹಿಸುವರು. ಸಂಸದ ಪಿ.ಸಿ. ಗದ್ದಿಗೌಡರ ಅಧ್ಯಕ್ಷತೆ ವಹಿಸುವರು. ಮುಖ್ಯ ಅತಿಥಿಗಳಾಗಿ ಮಾಜಿ ಮುಖ್ಯಮಂತ್ರಿ, ಸಂಸದ ಜಗದೀಶ ಶೆಟ್ಟರ ಆಗಮಿಸುವರು. ದೇವಾಂಗ ಸಂಘದ ರಾಜ್ಯಾಧ್ಯಕ್ಷ ರವೀಂದ್ರ ಕಲಬುರ್ಗಿ, ಅಖಿಲ ಭಾರತೀಯ ಸಂಘಟಕ ಶಂಕರಾನಂದಜೀ ಆಗಮಿಸುವರು. ಇದೇ ಸಂದರ್ಭದಲ್ಲಿ ಅಭಿನಂದನಾ ಸಮಿತಿಯ ನೋವುಂಡು ನಲಿದವರು, ಡಾ.ವಿ.ಎ.ಬೆನಕನಾಳ ಅವರ ರಾಷ್ಟ್ರನೇತಾರ ಅಟಲ್ ಬಿಹಾರಿ ವಾಜಪೇಯಿ, ಎಸ್.ವಿ.ಚವಡಾಪುರ ಅವರ ಆಂಗ್ಲ ಭಾಷೆಯಲ್ಲಿ ರಚಿಸಿದ ದೇವರ ದಾಸಿಮಯ್ಯನವರ ಆಯ್ದ 50 ವಚನಗಳು ಬಿಡುಗಡೆಗೊಳ್ಳಲಿವೆ.

ಕೃತಿ ಬಿಡುಗಡೆ... ನೋವು ನಲಿವು ಕೃತಿ ಲೋಕಾರ್ಪಣೆ, ಅಭಾಸಾಪ ಉದ್ಘಾಟನೆ, ಸನ್ಮಾನ

ಜೀವಪರ ನಿಲುವು ಕಾವ್ಯವಾಗಲಿ: ಡಾ.ದೊಡ್ಡಮನಿ

• **ಕನ್ನಡಪ್ರಭ ವಾರ್ತೆ** ಗುಳೇದಗುಡ್ಡ

ಕವಿ ತನ್ನ ಮೂಲಭೂತ ಒಳಮನಸ್ಸನ್ನು ಮರೆತು ಸಮಾಜದ ಸಂಕಟಕ್ಕೆ, ಹಸಿದವರ ನೋವಿಗೆ ಮಿಡಿಯಬೇಕು. ಪ್ರಭುತ್ವ ಶಾಹಿಗಳ ಅಟ್ಟಹಾಸದಲ್ಲಿ ಮನುಷ್ಯತ್ವ ಉಳಿಸುವ ಕವಿಯು ಜೀವ ಪರ ನಿಲುವನ್ನು ಪ್ರತಿಪಾದಿಸಿವ ಕಾವ್ಯ ರಚಿಸಬೇಕೆಂದು ಸಂಶೋಧಕ ಡಾ. ಸಣ್ಣವೀರಣ್ಣ ದೊಡ್ಡಮನಿ ಹೇಳಿದರು.

ಪಟ್ಟಣದ ಚಿತ್ರಚೇತನದಲ್ಲಿ ಅಖಿಲ ಭಾರತೀಯ ಸಾಹಿತ್ಯ ಪರಿಷತ್ ಸಹಕಾರದೊಂದಿಗೆ ಕವಿ ಮಹಾದೇವ ಜಗತಾಪ ರಚನೆಯ ನೋವು ನಲಿವು ಕೃತಿಯನ್ನು ಭಾನುವಾರ ಲೋಕಾರ್ಪಣೆಗೊಳಿಸಿ ಮಾತನಾಡಿ, ಬಂಡ ವಾಳಿಗರು ಬಡವರನ್ನು ನಿರ್ಗತಿ ಕರನ್ನಾಗಿಸಿ ಹಣದ ರುಜುವಾತಿಗೆ ಹೆಣದ ಸಾಕ್ಷಿ ಕೇಳುವ ಅಟ್ಟಹಾಸ ಹೆಚ್ಚಾಗಿದೆ. ದೌರ್ಜನ್ಯ ಎದುರಿಸಿ ಮಾನವೀಯತೆ ಉಳಿಸು ವುದೇ ಕವಿಯ ಧ್ಯೇಯವಾಗಲಿ. ಕವಿ ಮಹಾದೇವ ಜಗತಾಪ ನೋವು ನಲಿವು ಕಾವ್ಯದ ರೂಪಕ್ಕೆ ಇಳಿಸಿ ಸಮಾಜದಲ್ಲಿ ಅದನ್ನು ಪರಿಚಯಿಸುವ ಕಾರ್ಯ ಮಾಡಿದ್ದಾರೆ ಎಂದು ಹೇಳಿದರು.



ಗುಳೇದಗುಡ್ಡದಲ್ಲಿ ಮಹಾದೇವ ಜಗತಾಪ ಅವರ ನೋವು ನಲಿವು ಕೃತಿಯನ್ನು ಡಾ.ಸಣ್ಣವೀರಣ್ಣ ದೊಡ್ಡಮನಿ ಭಾನುವಾರ ಲೋಕಾರ್ಪಣೆಗೊಳಿಸಿದರು.

ಕೃತಿ ಕುರಿತು ಪ್ರೊ.ಚಂದ್ರಶೇಖರ ಹೆಗಡೆ ಮಾತನಾಡಿ, ಮಹಾದೇವ ಜಗತಾಪ ಅವರ ಕಾವ್ಯ ರಾಷ್ಟ್ರಪ್ರೇಮವನ್ನು ಪ್ರತಿಪಾದಿಸುತ್ತದೆ. ಕವಿಯ ಆಲೋಚನೆ ನವೋದಯದ ಛಾಯೆಯಾಗಿ, ಸಾಂಸ್ಕೃತಿಕ ಹಿರಿಮೆ, ಇತಿಹಾಸ, ಚಿತ್ರಕಲಾ ಯೋಗ ಪರಿಣಿತಿಯ ಅನುಭವಗಳ ಕನ್ನಡಿಯಾಗಿದೆ ಎಂದರು.

ಡಾ.ರಾಜಶೇಖರ ಬಸುಪಟ್ಟದ ಮಾತನಾಡಿ, ಕವಿ ಮಹಾದೇವ ಜಗತಾಪ ಅವರು ನಿವೃತ್ತಿ ಆದ ನಂತರ ಕಾವ್ಯ ಕ್ಷೇತ್ರದಲ್ಲಿ ಗುರುತಿಸಿಕೊಂಡಿರುವುದು ಅವರ ಬಹುಮುಖ ಪ್ರತಿಭೆಗೆ ಸಾಕ್ಷಿಯಾಗಿದೆ ಎಂದರು.

ಡಾ.ವಿ.ಎ.ಬೆಳಕಿನಾಳ ಅಧ್ಯಕ್ಷತೆ ವಹಿಸಿ, ಮಹಾದೇವ ಜಗತಾಪ ಅವರು ಯೋಗ ಮತ್ತು ಚಿತ್ರ ಕಲೆಯನ್ನು ರೂಢಿಸಿಕೊಂಡು ಇತ್ತೀಚೆಗೆ ಸಾಹಿತ್ಯ ಕ್ಷೇತ್ರದಲ್ಲಿ ನೋವು ನಲಿವು ಕವನ ಸಂಕಲನದ ಮೂಲಕ ಸಾಹಿತ್ಯಕ್ಕೆ ಮಹತ್ವದ ಕೊಡುಗೆ ನೀಡಿದ್ದು ಪ್ರಶಂಸನೀಯ ಎಂದು ಹೇಳಿದರು.

ರಾಜ್ಯ ಅಖಿಲ ಭಾರತ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಜಿ.ಎಸ್. ಕೋಟಿ, ಥೈಲ್ಯಾಂಡ್ದಲ್ಲಿ ಸ್ಪಿರಿಟ್ ಯೋಗ ಕೇಂದ್ರ ತೆರೆದು ಹೆಸರಾದ ಮಾರುತಿ ಜಗತಾಪ ಅವರನ್ನು ಸನ್ಮಾನಿಸಲಾಯಿತು. ಅಭಾಸಾಪ ಕಾರ್ಯದರ್ಶಿ ಮಲ್ಲಿಕಾರ್ಜುನ ರಾಜನಾಳ ನಿರೂಪಿಸಿ, ವಂದಿಸಿದರು.

ಕಾರ್ಯಕ್ರಮದಲ್ಲಿ ಡಾ.ವಿ.ಎನ್. ಢಾಣಕಶಿರೂರ, ಅಶೋಕ ಹೆಗಡೆ, ಸುರೇಶ ಪರ್ವತೀಕರ, ರವಿ ಅಂಗಡಿ, ಸಿದ್ದು ರಾವಳ, ಎಸ್. ಎಸ್.ಗುರವ, ಸುರೇಶ ವಗ್ಗಾ, ಸಿದ್ದರಾಮಯ್ಯ ಪುರಾಣಿಕಮಠ, ದೀಪಕ ಜಗತಾಪ, ಮೋಹನ ಕರನಂದಿ, ವಿದ್ಯಾ ಜಗತಾಪ, ಶಶಿಕಲಾ ಜಗತಾಪ, ಹುಚ್ಚೇಶ ಯಂಡಿಗೇರಿ, ಲಕ್ಷ್ಮೀಬಾಯಿ ಜಾಧವ ಇತರರು ಇದ್ದರು.

ಮಹಾಕೂಟೇಶ್ವರ ದೇವರ ಗಡ್ಡಿರಥೋತ್ಸವ

• **ಕನ್ನಡಪ್ರಭ ವಾರ್ತೆ** ಬಾದಾಮಿ

ಬಾಗಲಕೋಟೆ ಜಿಲ್ಲೆಯ ಬಾದಾಮಿ ತಾಲೂಕಿನ ಮಹಾಕೂಟದಲ್ಲಿ ಶನಿವಾರ ಸಂಜೆ 6ಕ್ಕೆ ಮಹಾಕೂಟೇಶ್ವರ ರಥೋತ್ಸವ ಸಹಸ್ರಾರು ಭಕ್ತರ ಸಮ್ಮುಖದಲ್ಲಿ ಅದ್ದೂರಿಯಾಗಿ ಜರುಗಿತು.

ಶುಕ್ರವಾರ ರಾತ್ರಿ 8ಕ್ಕೆ ಮಹಾಕೂಟೇಶ್ವರ ದೇವರ ಹೂವಿನಿಂದ ಅಲಂಕಾರಗೊಂಡ ಹೂವಿನ ರಥೋತ್ಸವಕ್ಕೂ ಅತ್ಯಧಿಕ ಭಕ್ತರು ಪಾಲ್ಗೊಂಡು ತೇರು ಎಳೆದಿದ್ದರು. ಚಾಲುಕ್ಯರ ಕಾಲದಲ್ಲಿ ವಿಜಯದ ಸಂಕೇತ ಎಂಬ ಇತಿಹಾಸದ ಪುಟದಲ್ಲಿರುವ ಮಹಾಕೂಟ ಕ್ಷೇತ್ರಕ್ಕೆ ಭಕ್ತಸಾಗರ ಹರಿದು ಬಂದಿತ್ತು. ಎರಡು ದಿನಗಳ ಕಾಲ ಇಲ್ಲಿಯೇ ಬೇಡು ಬಿಟ್ಟು ರಥೋತ್ಸವದಲ್ಲಿ ಪಾಲ್ಗೊಂಡ ಭಕ್ತರು ಉತ್ತತ್ತಿ, ಹೂವು ಅರ್ಪಿಸಿದರು. ಮಹಾಕೂಟೇಶ್ವರ ಟ್ರಸ್ಟ್ ವತಿಯಿಂದ ಎರಡು ದಿನಗಳ ಕಾಲ ಉಚಿತ ಪ್ರಸಾದ ವ್ಯವಸ್ಥೆ ಮಾಡಿ ಉದುರು ಸಜ್ಜಕ, ಸಿಹಿ ಹುಗ್ಗಿ ಉಣಬಡಿಸಿದರು. ಈ ಸಂದರ್ಭದಲ್ಲಿ ಶಾಸಕ ಭೀಮಸೇನ ಚಿಮ್ಮನಕಟ್ಟಿ, ಟ್ರಸ್ಟ್ ಮುಖ್ಯಸ್ಥ, ಮಾಜಿ ಶಾಸಕ ಎಂ.ಕೆ. ಪಟ್ಟಣಶೆಟ್ಟಿ, ಡಿಸಿಸಿ ಬ್ಯಾಂಕಿನ ಮಾಜಿ ನಿರ್ದೇಶಕ ಕುಮಾರಗೌಡ ಜನಾಲಿ, ಶಾಂತಾದೇವಿ ಪಟ್ಟಣಶೆಟ್ಟಿ, ಎಂ.ಬಿ. ಹಂಗರಗಿ, ಬಿ.ಆರ್. ಪಾಟೀಲ, ಮುತ್ತಣ್ಣ ಕಳ್ಳಿಗುಡ್ಡ, ಮುಕ್ಕನಗೌಡ ಜನಾಲಿ, ಶಂಕರ ಶಾಸ್ತ್ರಿ, ಕುಮಾರ ಪಟ್ಟಣಶೆಟ್ಟಿ, ಮುತ್ತಣ್ಣ ಚಿನಿವಾಲರ, ಮಹಾಂತೇಶ ಬೆಣ್ಣಿ, ಮಹೇಶ ಪಾಟೀಲ, ಪಿಎಸೈ ಹನುಮಂತ ನರಳೆ ಸೇರಿದಂತೆ ಭಕ್ತರು ಇದ್ದರು.

